ಜನಪದ ವಿಚಾರ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೦ ಡಿಸೆಂಬರ್- ೨೦೦೯ ಸಂಚಿಕೆ-೫



ಜನಪದ ವಿಚಾರದಲ್ಲಿ

ಡಿಸೆಂಬರ್-೨೦೦೯

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಡಿಸೆಂಬರ್ – ೨೦೦೯
ಸಂಪುಟ – ೧೦
ಸಂಚಿಕೆ – ೫

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಮಂಕುತಿಮ್ಮನ ಕಗ್ಗದಲ್ಲಿ ಪರಿಸರ ಪ್ರೀತಿ

ತೃಣಕೆ ಹಸಿರೆಲ್ಲಿಯದು? ಬೇರಿನದೆ? ಮಣ್ಣಿನದೇ? ।
ದಿನಪನದೆ? ಚಂದ್ರನದೆ? ನೀರಿನದೆ? ನಿನದೆ? ॥
ತಣಿತಣಿವ ನಿನ್ನ ಕಣ್ಣಿನ ಪುಣ್ಯವೋ? ನೋಡು ।
ಗುಣಕೆ ಕಾರಣವೊಂದೆ? – ಮಂಕುತಿಮ್ಮ ॥

ಆಗುಂಬೆಯಸ್ತಮಯ ದ್ರೋಣಪರ್ವತದುದಯ ।
ತ್ಯಾಗರಾಜನ ಗಾನ ವಾಲ್ಮೀಕಿ ಕವನ ॥
ಆಗಿಸವೆ ತಾವಿವೆಮ್ಮಂತರಂಗದಿ ಸತ್ಯ ।
ಯೋಗಪುಲಕಾಂಕುರವ ? – ಮಂಕುತಿಮ್ಮ ॥

ಪ್ರಕೃತಿಯಿಂ ಪೊರೆಗಿರುವ ನರೆನಾರು ಸೃಷ್ಟಿಯಲಿ? ।
ಸ್ವಕೃತಿಯೆಂದವನೆನುವುದವಳಿರದೊಡಿರದು ॥
ಸುಕೃತವೆನಿಸುವುದವಳ ನೀಂ ವಶಕೆ
ಕೊಳುವ ನಯ।
ವಿಕೃತಿಗೆಡೆಯಾಗದಿರೋ – ಮಂಕುತಿಮ್ಮ ॥

ಪೊಸರಸಂ ಬೇರಿಗನುದಿನಮೊದವಿ ಧರೆಯಿಂದ ।
ಸಸಿಗೆ ಹೊಸತಳಿರ ತಲೆಯಲಿ ಮುಡಿಸುವಂತೆ ॥
ಹೊಸ ಸೃಷ್ಟಿಸತ್ವಮೆತ್ತಣನೊ ಬರುತನುದಿನಂ ।
ಪೊಸತಾಗಿಪುದು ಜಗವ – ಮಂಕುತಿಮ್ಮ ॥

ಪರಿಪರಿಯ ರೂಪಕಾಂತಿಗಳ ಕಣ್ಣಾಗಿಸುವ ।
ಪರಿಪರಿಯ ಫಲಮಧುರಗಳ ರಸನೆಗುಣಿಪ ॥
ಪರಿಪರಿಯ ಕಂಠರವಗಳ ಕಿವಿಗೆ ಸೋಕಿಸುವ ।
ಗುರುಸೃಷ್ಟಿ ರಸಿಕತೆಗೆ – ಮಂಕುತಿಮ್ಮ ॥

ಆಗಸದ ಬಾಗು, ಚಂದ್ರಮನ ಗುಂಡಿನ ನುಣ್ಪು ।
ಸಾಗರದ ತೆರೆವಂಕು, ಗಿಡಬಳ್ಳಿ ಬಳಕು ॥
ಮೇಘವರ್ಣಚ್ಛಾಯೇಯೀ ಸೃಷ್ಟಿಯಿಂ ನಮ್ಮೊ ।
ಳಾಗಿಹುದು ರೂಪರುಚಿ – ಮಂಕುತಿಮ್ಮ ॥

– ಡಿ.ವಿ.ಜಿ

ವಿಚಾರ ದೀಪ್ತಿ

ಅತಿಯಾದ ಆಸೆಯೇ ಪ್ರಪಂಚದ ಇಂದಿನ ದುಃಸ್ಥಿತಿಗೆ ಮೂಲಕಾರಣ. ನಿಧಾನಕ್ಕೆ ಬದಲು ವೇಗ, ಕಡಿಮೆಗೆ ಬದಲು ಹೆಚ್ಚು – ಈ ಮಿಂಚಿನ 'ಅಭಿವೃದ್ಧಿ'ಗೂ, ಸಮಾಜದ ಕೇಡುತನಕ್ಕೂ, ನಾಶಕ್ಕೂ ನೇರವಾದ ಸಂಬಂಧ ಇದೆ. ಇದು ಮನುಷ್ಯನನ್ನು ಪ್ರಕೃತಿಯಿಂದ ದೂರ ಮಾಡುವಷ್ಟು ಮಾತ್ರ ಸಹಾಯ ಮಾಡಿದೆ. ಮಾನವಕೋಟಿ ಅತಿಯಾದ ವಸ್ತುಮೋಹ ಮತ್ತು ಸ್ವಲಾಭ ಬಿಟ್ಟು ಮಾನಸಿಕ ಜಾಗೃತಿಯ ಕಡೆಗೆ ಹೋಗಬೇಕಿದೆ. ವ್ಯವಸಾಯ ಕ್ಷೇತ್ರ ಬೃಹತ್ ಯಂತ್ರಗಳನ್ನು ಬಿಟ್ಟು ಚಿಕ್ಕ ಹಿಡುವಳಿಯ ತೋಟದ ಕಡೆಗೆ ಸೀಮಿತವಾಗಿರಬೇಕಾಗುತ್ತದೆ. ಲೌಕಿಕ ಬದುಕಿಗೆ ಹಾಗೂ ಆಹಾರ ಪದ್ಧತಿಗೆ ಬಹಳ ಕಡೆಯ ಸ್ಥಾನ ಕೊಡಬೇಕಾಗಿದೆ. ಆಗ ಕೆಲಸದಲ್ಲಿ ಸಂತೋಷ ಸಿಗುತ್ತದೆ; ಆಧ್ಯಾತ್ಮಿಕ ಬೆಳವಣಿಗೆಗೆ ಹೆಚ್ಚಿನ ಅವಕಾಶ ದೊರೆಯುತ್ತದೆ.

ರೈತ ತನ್ನ ಕೆಲಸವನ್ನು ಹೆಚ್ಚು ಮಾಡಿಕೊಂಡಷ್ಟೂ ಅವನ ದೇಹದ ಶಕ್ತಿ ಮತ್ತು ಚೈತನ್ಯ ಕಮ್ಮಿಯಾಗುತ್ತದೆ. ಸಣ್ಣ ಹಿಡುವಳಿ ವ್ಯವಸಾಯ ಬಹಳ ಪುರಾತನವಾದದ್ದು ಎನಿಸಬಹುದು. ಆದರೆ ಅದರಲ್ಲಿ ರಾಜಮಾರ್ಗದ ಬಗ್ಗೆ ಚಿಂತಿಸಲು ಅವಕಾಶವಿದೆ. ಯಾವುದೇ ಒಬ್ಬ ವ್ಯಕ್ತಿ ತನ್ನ ಸುತ್ತಲಿನ ಸಮಾಜ ಹಾಗೂ ಅವನ ದಿನದಿನದ ಬದುಕನ್ನು ಆಳವಾಗಿ ಶೋಧಿಸಿದರೆ ಬದುಕಿನ ಸರ್ವೋತ್ತಮ ಅಂಶದ ಅರಿವಾಗುತ್ತದೆ.

ಅನೇಕ ವರ್ಷಗಳ ಹಿಂದೆ 'ಒಂದು ಎಕರೆಯ ರೈತ' ವರ್ಷದ ಪ್ರಾರಂಭದ ಮೂರು ತಿಂಗಳುಗಳನ್ನು ಮೊಲದ ಬೇಟೆಯಾಡುತ್ತಾ ಕಳೆಯುತ್ತಿದ್ದ. ಅವನು ಬಡ ರೈತ ಎಂದು ಕರೆಸಿಕೊಂಡಿದ್ದರೂ ಪೂರ್ಣ ಸ್ವಾತಂತ್ರ್ಯ ಹೊಂದಿದ್ದ. ಹೊಸ ವರ್ಷದ ರಜೆ ಅವನಿಗೆ ೩ ತಿಂಗಳು ಸಿಗುತ್ತಿತ್ತು. ಕ್ರಮೇಣ ಈ ರಜೆ ೩ ತಿಂಗಳಿಂದ ೨ ತಿಂಗಳಿಗೆ, ನಂತರ ೧ಕ್ಕೆ ಇಳಿದು ಈಗ ೩ ದಿನಕ್ಕೆ ಬಂದು ನಿಂತಿದೆ. ಹೀಗೆ ಕಡಿತಗೊಂಡ ರಜಾ ಅವಧಿಯೇ ರೈತ ಎಷ್ಟೊಂದು ಅವಿಶ್ರಾಂತನಾಗಿಬಿಟ್ಟಿದ್ದಾನೆ ಎಂಬುದನ್ನು ತೋರಿಸುತ್ತದೆ ಮತ್ತು ಹೇಗೆ ಬಹಳ ಉತ್ತಮವಾಗಿದ್ದ ತನ್ನ ದೈಹಿಕ ಮತ್ತು ಮಾನಸಿಕ ಆರೋಗ್ಯ ಹಾಳು ಮಾಡಿಕೊಂಡಿದ್ದಾನೆ ಎಂಬುದನ್ನೂ ತೋರಿಸುತ್ತದೆ. ಆಧುನಿಕ ಕೃಷಿ ಪದ್ಧತಿ ರೈತನಿಗೆ ಒಂದು ಕವನ ಬರೆಯಲಿಕ್ಕಾಗಲೀ, ಒಂದು ಹಾಡನ್ನು ಕಟ್ಟಲಿಕ್ಕಾಗಲೀ ಅನುವು ಸಿಗದಷ್ಟು ಕೆಲಸ ಹಚ್ಚಿಬಿಟ್ಟಿದೆ.

– *ಮಸನೊಬು ಫುಕುವೊಕಾ*

* * *

ಕೋಪೆನ್ ಹೇಗನ್
ಪರಿಸರ ರಕ್ಷಕರಿಗೆ ಒಂದು ಸವಾಲು

- ಸುರೇಂದ್ರ ಕೌಲಗಿ

ಕೈಗಾರಿಕಾ ಕ್ರಾಂತಿಯಾದಾಗಿನಿಂದಲೂ ಜಾಗತಿಕ ವಾಯುಮಾಲಿನ್ಯ ನಿಧಾನವಾಗಿ ಹೆಚ್ಚುತ್ತಲೇ ಇದೆ. ಈಗ ೨೧ನೇ ಶತಮಾನದ ಆದಿಭಾಗದಲ್ಲಿ ಜಗತ್ತು ಭೂ ತಾಪಮಾನದಲ್ಲಿಯ ಶೀಘ್ರ ಹೆಚ್ಚುವಿಕೆಯಿಂದ ವಿನಾಶದ ಅಂಚಿಗೆ ಬಂದುನಿಂತಿದೆಯೇ ಎಂಬ ಭೀತಿ ಭೂ ನಿವಾಸಿಗಳನ್ನೆಲ್ಲ ಬೆಂಬತ್ತಿದೆ. ಮಾಲಿನ್ಯದ ವಿಕೋಪ ಎಷ್ಟು ಹೆಚ್ಚಾಗಿದೆಯೆಂದರೆ ಈ ಮಾಲಿನ್ಯದ ಹೊಗೆಯಿಂದ ಹೊರಬರಲು ಸಾಧ್ಯವಿಲ್ಲವೆಂಬಂಥ ಪರಿಸ್ಥಿತಿ ಉಂಟಾಗಿದೆ. ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋಗದಂತೆ ಯಾವ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಬಹುದೆಂಬ ಬಗ್ಗೆ ಗಂಭೀರ ಚರ್ಚೆ ನಡೆಸಲು ಡಿಸೆಂಬರ್ ಏಳಕ್ಕೆ ಡೆನ್ಮಾರ್ಕ್‌ನ ಕೋಪೆನ್‌ಹೇಗನ್‌ನಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ ನಡೆಯಲಿದೆ. ಈ ಸಮ್ಮೇಳನದಲ್ಲಿ ಅಭಿವೃದ್ಧಿ ಹೊಂದಿದ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಾಯಕರು ಹಾಗೂ ಪರಿಸರ ರಕ್ಷಕರು ಸೇರುತ್ತಿದ್ದಾರೆ. ಈ ಮೊದಲು ೧೯೭೯, ೧೯೮೨, ೧೯೯೨, ೧೯೯೫, ೧೯೯೭, ೨೦೦೦, ೨೦೦೭ನೇ ಇಸ್ವಿಗಳಲ್ಲಿ ಅಂದರೆ ಏಳು ಬಾರಿ ಚರ್ಚೆ ನಡೆದಿದೆ. ಈಗ ೨೦೦೯ರಲ್ಲಿ ಎಂಟನೇ ಬಾರಿಗೆ ಚರ್ಚೆ ನಡೆಯಲಿದೆ. ಆದರೆ ಚರ್ಚೆ ಪ್ರಾರಂಭವಾಗುವ ಮೊದಲೇ ಸಮ್ಮೇಳನ ವಿಫಲಗೊಳ್ಳುವ ಸೂಚನೆ ಗೋಚರಿಸುತ್ತಿವೆ.

ರಾಜಕೀಯವಾಗಿ ಜಗತ್ತು ಉತ್ತರ ಮತ್ತು ದಕ್ಷಿಣ ಎಂದು ಎರಡು ಭಾಗಗಳಲ್ಲಿ ಪರಿಗಣಿಸಲ್ಪಡುತ್ತಿರುವಂತೆ ಅಭಿವೃದ್ಧಿ ಹೊಂದಿದ ಜಗತ್ತು ಮತ್ತು ಅಭಿವೃದ್ಧಿ ಹೊಂದುತ್ತಿರುವ ಜಗತ್ತು ಮತ್ತು ಹಿಂದುಳಿದಿರುವ ಜಗತ್ತು ಎಂದು ಆಯಾ ಪ್ರದೇಶದ ಆರ್ಥಿಕ ಸ್ಥಿತಿಗತಿಗಳ ಮೇಲೆ ಗುರುತಿಸಲ್ಪಡುತ್ತಿದೆ. ಈಗ ಕೊಪೆನ್‌ಹೇಗನ್ ಸಮ್ಮೇಳನದ ಮುಂದೆ ಇರುವ ಸಮಸ್ಯೆ ಇದೇ ಆಗಿದೆ. ಜಗತ್ತನ್ನು ಅಭಿವೃದ್ಧಿ ಆಧಾರಿತ ಹಾಗೂ ಆರ್ಥಿಕ ಬೆಳವಣಿಗೆ ಆಧಾರಿತವಾಗಿ ವಿಂಗಡಿಸಿಕೊಂಡೇ ಮುಂದುವರಿಯಬೇಕೆ ಅಥವಾ ಜಗತ್ತಿನ ಮತ್ತು ಭೂಲೋಕದ ಪ್ರಾಕೃತಿಕ ಸಂಪತ್ತನ್ನು ಎಲ್ಲ ರಾಷ್ಟ್ರಗಳು ಹಿತಮಿತವಾಗಿ ಬಳಸುತ್ತ ಎಲ್ಲ ದೇಶಗಳ ಅಭಿವೃದ್ಧಿ ಸಮಾನವಾಗಿ ಆಗುವಂತೆ ಮಾಡಿ ದೇಶದೇಶಗಳ ಮಧ್ಯದಲ್ಲಿಯ ತಾರತಮ್ಯ ಹೋಗುವಂತೆ ಮಾಡಬೇಕೆ ಎಂಬ ಪ್ರಶ್ನೆ ಕೊಪೆನ್‌ಹೇಗನ್ ಮುಂದೆ ಇದೆ. ಆದರೆ ಎಲ್ಲ ದೇಶಗಳೂ ಅಭಿವೃದ್ಧಿಯೆಂಬ ಮರೀಚಿಕೆಯ ಹಿಂದೆ ಓಡುತ್ತಿವೆ. ಅಭಿವೃದ್ಧಿ ಸಾಧಿತಗೊಳ್ಳಬೇಕಾದರೆ ಆರ್ಥಿಕ ಬೆಳವಣಿಗೆ ಮತ್ತು ಆಯಾ ದೇಶದ ಜಿಡಿಪಿ ಬೆಳವಣಿಗೆ ನಿರಂತರವಾಗಿರಬೇಕಾದುದು ಅಗತ್ಯ. ಅಭಿವೃದ್ಧಿಯ ವೇಗವನ್ನು ಯಾವ ದೇಶವೂ ತಗ್ಗಿಸಲು ಸಿದ್ಧವಿಲ್ಲ. ಬದಲಿಗೆ ಅದನ್ನು ದ್ವಿಗುಣಗೊಳಿಸುವ ಯೋಚನೆ ಪ್ರತಿಯೊಂದು ದೇಶದ್ದಾಗಿದೆ. ಈ ವಿಷಯದಲ್ಲಿ

ಅಭಿವೃದ್ಧಿ ಹೊಂದಿದ ದೇಶಗಳಾದ ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್‌ನಂಥ ದೇಶಗಳು ತಳೆದಿರುವ ಬಿಗಿನೀತಿ ಕೊಪೆನ್‌ಹೇಗನ್ ಸಮ್ಮೇಳನ ವಿಫಲವಾಗುವುದಕ್ಕೆ ಕಾರಣವಾದರೆ ಆಶ್ಚರ್ಯವೇನಲ್ಲ. ಅಭಿವೃದ್ಧಿಶೀಲ ರಾಷ್ಟ್ರಗಳು ಪರಿಸರ ಸಂರಕ್ಷಣೆಯ ಹೆಸರಿನಲ್ಲಿ, ಜಾಗತಿಕ ತಾಪಮಾನದಲ್ಲಿಯ ಹೆಚ್ಚಳದ ಕಾರಣದಿಂದಾಗಿ ತಮ್ಮ ಅಭಿವೃದ್ಧಿ ಬೆಳವಣಿಗೆಯನ್ನು ಕೈಬಿಡಲು ಸಿದ್ಧವಿಲ್ಲ.

ಕೊಪೆನ್‌ಹೇಗನ್‌ನಲ್ಲಿ ನಾವು ಕಾಣಲಿರುವುದು ಅಭಿವೃದ್ಧಿ ಹೊಂದಿದ ದೇಶ ಮತ್ತು ಅಭಿವೃದ್ಧಿ ಹೊಂದದ ದೇಶಗಳ ಮಧ್ಯ ಹಗ್ಗದೆಳೆದಾಟ. ಕೊಪೆನ್‌ಹೇಗನ್ ಮಧ್ಯದ ಗುರುತಿನ ಗೆರೆ. ಒಂದು ವೇಳೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಮಧ್ಯದ ಗುರುತಿನ ಗೆರೆಯ ಆಚೆಗೆ ಹಗ್ಗ ಎಳೆಯಲು ಸಮರ್ಥವಾದರೆ ಜಾಗತಿಕ ತಾಪಮಾನ ಹೆಚ್ಚಾಗುತ್ತ ಹೋಗುವುದರಲ್ಲಿ ಸಂಶಯವಿಲ್ಲ. ಒಂದು ವೇಳೆ ಅಭಿವೃದ್ಧಿಶೀಲ ರಾಷ್ಟ್ರಗಳು ಹಗ್ಗವನ್ನು ತಮ್ಮೆಡೆಗೆಳೆಯಲು ಸಮರ್ಥವಾದರೆ ಅವು ತಮ್ಮ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯ ವಾಖ್ಯೆಯನ್ನು ಬದಲಾಯಿಸಿಕೊಳ್ಳಬೇಕಾಗುವುದು. ಅಂದರೆ, ಅವು ಪಾಶ್ಚಿಮಾತ್ಯಮಾದರಿಯ ಕೈಗಾರಿಕಾ ನೀತಿಯನ್ನೂ, ಜೀವನಶೈಲಿಯನ್ನೂ ಬಿಟ್ಟುಕೊಡಬೇಕಾಗುತ್ತದೆ. ಜೊತೆಗೆ ಈಗ ಅಭಿವೃದ್ಧಿ ಹೊಂದಿರುವ ಅಮೇರಿಕಾದಂಥ ದೇಶಗಳು ತಮ್ಮ ಮುಂದಿನ ಆರ್ಥಿಕ ಬೆಳವಣಿಗೆಗೆ ಹಾಗೂ ಅಭಿವೃದ್ಧಿಗೆ ಪೂರಕವಾಗುವಂತೆ ಅಭಿವೃದ್ಧಿಶೀಲ ದೇಶಗಳು ದೇಶದಲ್ಲಿಯ ನೈಸರ್ಗಿಕ ಸಂಪತ್ತನ್ನು ಬಿಟ್ಟುಕೊಡಕೂಡದು. ಈ ಸಂಬಂಧದಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಸಂಘಟಿತವಾಗಿರಬೇಕಾದದ್ದು ಅಗತ್ಯ. ಅಮೇರಿಕಾ ಈಗಿನ ತನ್ನೆಲ್ಲ ಹಣಬಲ, ಶಸ್ತ್ರಬಲ, ಐರೋಪ್ಯ ರಾಷ್ಟ್ರಗಳ ರಾಜಕೀಯ ಬೆಂಬಲ ಮುಂತಾದವುಗಳಿಂದ ಜಗತ್ತಿನಲ್ಲಿಯ ಎಲ್ಲ ರಾಷ್ಟ್ರಗಳಲ್ಲಿಯ ಎಲ್ಲ ಪ್ರಕೃತಿ ಸಂಪತ್ತಿನ ಮೇಲೆ ಒಡೆತನ ಸಾಧಿಸಲು ಪ್ರಯತ್ನಿಸುತ್ತಿದೆ. ನವೆಂಬರ್ ೨೫ರಂದು ಭಾರತದ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅಮೇರಿಕಾಕ್ಕೆ ನಾಲ್ಕು ದಿನಗಳ ಭೇಟಿಗೆ ಹೋದ ಸಂದರ್ಭದಲ್ಲಿ ಅಮೇರಿಕಾದ ಅಧ್ಯಕ್ಷ ಬರಾಕ್ ಒಬಾಮಾ ಸಿಂಗ್‌ರನ್ನು ಮುಖ್ಯ ಅತಿಥಿಯಾಗಿ ಸ್ವಾಗತಿಸಿ ಭಾರತವನ್ನು ಬಹುವಾಗಿ ಹೊಗಳಿದ್ದಾರೆ. ಅಮೇರಿಕಾ ಮತ್ತು ಭಾರತ ಅನೇಕ ಕ್ಷೇತ್ರಗಳಲ್ಲಿ ಜೊತೆಗೂಡಿ ಕೆಲಸ ಮಾಡುವುವು ಎಂದು ಹೇಳಿದ್ದಾರೆ. ಒಬಾಮಾ ಹೇಳಿದುದರಲ್ಲಿ ಯಾವ ಹೊಸ ಮಾತೂ ಇಲ್ಲ. ಭಾರತದ ನಿಜವಾದ ಸಮಸ್ಯೆಗಳಾದ ಪಾಕಿಸ್ತಾನ ಮತ್ತು ಚೀಣಾದ ಆಕ್ರಮಣಶೀಲತೆ ಮತ್ತು ಭಯೋತ್ಪಾದಕತೆ ಇತ್ಯಾದಿಗಳ ಬಗ್ಗೆ ಒಬಾಮಾ ಯಾವ ಸ್ಪಷ್ಟ ಭರವಸೆಯನ್ನೂ ಕೊಟ್ಟಿಲ್ಲ. ಅಷ್ಟೇ ಅಲ್ಲ ಇನ್ನು ಕೆಲವೇ ದಿನಗಳಲ್ಲಿ ಒಬಾಮಾ ಪಾಕಿಸ್ತಾನದ ಅಧ್ಯಕ್ಷರನ್ನು ಅಮೇರಿಕಾಕ್ಕೆ ಬರಮಾಡಿಕೊಂಡು ಅವರೊಂದಿಗೆ ವಿಶ್ವಾಸದ ಮಾತುಗಳನ್ನು ಆಡಿದರೆ ಆಶ್ಚರ್ಯವೇನಿಲ್ಲ!

ಕೊಪೆನ್‌ಹೇಗನ್‌ನಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಕೈಕಾಲು ಕಟ್ಟಿಹಾಕುವ ಪ್ರಯತ್ನ ಮಾಡುವವು. ಹಾಗಾಗದಂತೆ ಅಭಿವೃದ್ಧಿಶೀಲ ರಾಷ್ಟ್ರಗಳು ಜಾಗ್ರತವಾಗಿರಬೇಕಾದದ್ದು ಅವಶ್ಯ. ಈ ವಿಷಯದಲ್ಲಿ ಚೀಣಾ ಯಾವ ರೀತಿ ಹೆಜ್ಜೆ ಇಡುತ್ತದೆಂಬುದು ಕೂಡ ಮುಖ್ಯವಾಗುತ್ತದೆ.

ಕೊಪೆನ್‌ಹೇಗನ್ ಸಮ್ಮೇಳನದ ಅಗತ್ಯವಾದರೂ ಏಕೆ ಉಂಟಾಯಿತು?

ಜಗತ್ತಿನ ಶ್ರೀಮಂತ ದೇಶಗಳು ನಡೆಸಿದ ಅನಿಯಂತ್ರಿತ ಐಷಾರಾಮಿ ಜೀವನ ಪದ್ಧತಿ. ತಮ್ಮೀ ಪದ್ಧತಿಯಿಂದ ಜಾಗತಿಕ ಸಮಸ್ಯೆಗಳು ಉಂಟಾಗುತ್ತಿವೆಯೆಂದು ಅವುಗಳಿಗೆ ಗೊತ್ತಾಗುತ್ತಿದ್ದಂತೆ ಜಗತ್ತಿನ ಇತರ ಎಲ್ಲ ರಾಷ್ಟ್ರಗಳು ಕೂಡ ಐಷಾರಾಮಿ ಜೀವನ ಪದ್ಧತಿ ಅನುಸರಿಸುವಂತೆ ಮಾಡುವುದರಲ್ಲಿಯೇ ತಮ್ಮ ಸುರಕ್ಷಿತತೆ ಅಡಗಿದೆಯೆಂದು ತೀರ್ಮಾನಿಸಿ ಅದರಂತೆ ಅಭಿವೃದ್ಧಿಶೀಲ ಮತ್ತು ಬಡರಾಷ್ಟ್ರಗಳು ನಡೆಯುವಂತೆ ತಮ್ಮ ಹಣಬಲ ಮತ್ತು ರಾಜಕೀಯ ಬಲವನ್ನು ಉಪಯೋಗಿಸಲು ಪ್ರಾರಂಭಿಸಿದವು. ಕುಡುಕ ತಾನು ಕೆಡುವುದಲ್ಲದೆ ತನ್ನ ಜೊತೆಯವರನ್ನೂ ಕುಡಿಸಿ ಹಾಳುಮಾಡುತ್ತಾನೆಂಬಂತಾಯಿತು.

ಕೊಪೆನ್‌ಹೇಗನ್ ಸಮ್ಮೇಳನದಲ್ಲಿ ಜಾಗತಿಕ ತಾಪಮಾನ ನಿಯಂತ್ರಣ ವಿಷಯದಲ್ಲಿ ಅಮೇರಿಕಾ ಅಡ್ಡಗಾಲು ಹಾಕಿದರೆ ಮತ್ತು ಅದು ತನ್ನ ಹಿರಿಯಣ್ಣನ ಚಾಳಿ ಮುಂದುವರಿಸಿದರೆ ಮತ್ತು ಕೊಯೊಟೊ ತೀರ್ಪಿಗೆ ಬದ್ಧನಾಗಲು ಇಷ್ಟ ಪಡದಿದ್ದರೆ ಅಭಿವೃದ್ಧಿಶೀಲ ರಾಷ್ಟ್ರಗಳು ಏನು ಮಡಬೇಕು? ಮುಂದಿನ ದಾರಿಯೇನು? ಈ ಬಗ್ಗೆ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವ ದೇಶಗಳು ಯೋಚನೆಮಾಡಿದಂತಿಲ್ಲ. ಅಮೇರಿಕಾವನ್ನು ಕಟ್ಟಿಹಾಕಬಹುದೆಂದು ಒಂದು ಸಮೂಹ ಭಾವಿಸಿದ್ದರೆ, ಇನ್ನೊಂದು ಸಮೂಹ ತಾನು ಅಮೇರಿಕಾವನ್ನು ಕಟ್ಟಿಹಾಕಬಲ್ಲನೆಂದು ಭಾವಿಸಿದೆ.

ಈ ಮೊದಲೇ ತಿಳಿಸಿರುವಂತೆ ಜಗತ್ತಿನ ಎಲ್ಲ ರಾಷ್ಟ್ರಗಳ ಸಮಾನ ವಿಕಾಸವಾಗಬೇಕಾದರೆ ಮಧ್ಯಮ ಮಾರ್ಗವನ್ನು ಅನುಸರಿಸಬೇಕು. ಇಂಥ ಮಾರ್ಗದ ಸಮರ್ಥಕರಾಗಿ ನೊಬೆಲ್ ಪ್ರಶಸ್ತಿ ವಿಜೇತ ಆರ್.ಕೆ.ಪಚಾರಿಯಂಥ ಹವಾಮಾನ ಬದಲಾವಣೆ ವಿಷಯತಜ್ಞರಿದ್ದಾರೆ. ಅವರೊಂದಿಗೆ ಧ್ವನಿಗೂಡಿಸುವ ಸಾವಿರಾರು ತಜ್ಞರು, ಜನಸಾಮಾನ್ಯರೂ ಇದ್ದಾರೆ. ಪಚಾರಿಯವರ ಪ್ರಕಾರ "ಈ ಭೂಮಿ ಪ್ರತಿಯೊಬ್ಬನ ಅಗತ್ಯವನ್ನು ಪೂರೈಸುತ್ತದೆ; ದುರಾಸೆಯನ್ನಲ್ಲ" ಎಂದು ಗಾಂಧೀಜಿ ಹೇಳಿರುವುದು ಸಾರ್ವಕಾಲಿಕ ಸತ್ಯ ಎಂದು ಅವರು ತಿಳಿಸಿದ್ದಾರೆ. ಪರಿಸರ, ಸಾಮಾಜಿಕ ಮತ್ತು ಆರ್ಥಿಕ ಪರಿಣಾಮವನ್ನು ಲೆಕ್ಕಿಸದ ಪಾಶ್ಚಿಮಾತ್ಯ ಕೈಗಾರೀಕರಣಕ್ಕಿಂತ ಮುಂದಿನ ಪೀಳಿಗೆಗಾಗಿ ಪರಿಸರವನ್ನು ಕಾಪಾಡುವ ಗಾಂಧೀ ಚಿಂತನೆಯ ಕೈಗಾರಿಕಾ ಅಭಿವೃದ್ಧಿಯೇ ಲೇಸು.

ಕೊಪೆನ್‌ಹೇಗನ್‌ನಲ್ಲಿಯ ಹದಿನೈದು ಮುಂದುವರಿದ ರಾಷ್ಟ್ರಗಳ ಸಮ್ಮೇಳನ ಪಚಾರಿಯವರ ಅಭಿಪ್ರಾಯವನ್ನು ಅನುಮೋದಿಸುವಂತಾಗಲಿ; ಜಾಗತಿಕ ತಾಪಮಾನದ ಅನಿಷ್ಟ ತೊಲಗುವಂತಾಗಲಿ.

* * *

ಶೀತಸಮರೋತ್ತರ ಜಗತ್ತು, ಒಂದು ವಿಮರ್ಷೆ

- ಮೈಕೆಲ್ ಗೋರ್ಬೋಚೇವ್

ಬರ್ಲಿನ್ ಗೋಡೆ ಬಿದ್ದು ಇಪ್ಪತ್ತು ವರ್ಷಗಳಾದವು. ಆ ಗೋಡೆಯು ಶೀತಸಮರದ ಲಜ್ಜಾಹೀನ ಸತ್ಯದ ಸಂಕೇತವೂ ಆಗಿತ್ತು. ಅಲ್ಲದೆ, ಪರಸ್ಪರ ಕಾದಾಡುವ ರಾಷ್ಟ್ರಗಳ ಪ್ರಭಾವಲಯದ ಅಪಾಯಕಾರಿ ವಿಶ್ವ ವಿಭಜನೆಯ ಸಂಕೇತವೂ ಆಗಿತ್ತು. ಸಂಭವಿಸಿ ಹೋದ ಆ ಘಟನೆಗಳನ್ನು ಇಂದು ನಾವು ಭಾವುಕತೆ ರಹಿತವಾಗಿ ಮತ್ತು ಹೆಚ್ಚು ವಿವೇಕಯುತವಾಗಿ ಜ್ಞಾಪಿಸಿಕೊಳ್ಳಬಹುದು. ಆಗ ಮೊದಲನೆಯ ಆಶಾದಾಯಕ ಹೇಳಿಕೆಯೇನೆಂದರೆ ಶೀತ ಸಮರದ ಪರಿಣಾಮವಾಗಿ ಇತಿಹಾಸ ಅಂತ್ಯಗೊಳ್ಳುವ ಘೋಷಣೆ ನಿಜವಾಗದಿರುವುದು. ಅನೇಕರು ಆ ರೀತಿ ಹೇಳಿದ್ದರೂ ಅದು ಗಣನೆಗೆ ಬರಲಿಲ್ಲ. ಆದರೆ ನನ್ನ ತಲೆಮಾರಿನ ರಾಜಕಾರಣಿಗಳು ಇಟ್ಟುಕೊಂಡಿದ್ದ ನಂಬಿಕೆ ಮತ್ತು ವಿಶ್ವಾಸವೂ ಕೂಡ ಕೈಗೂಡಿಲ್ಲ. ಶೀತ ಸಮರದ ನಂತರ ಮಾನವ ಜನಾಂಗ ಶಸ್ತ್ರಾಸ್ತ್ರಗಳ ಪೈಪೋಟಿಯ ಮೂರ್ಖತನವನ್ನು ಅಂತಿಮವಾಗಿ ಮರೆಯುತ್ತದೆ ಎಂಬ ಆಶಾಭಾವನೆ, ಅಂತೆಯೇ ಅಪಾಯಕಾರಿ ಪ್ರಾದೇಶಿಕ ಸಂಘರ್ಷಗಳನ್ನು ಹಾಗೂ ನಿರರ್ಥಕ ಸೈದ್ಧಾಂತಿಕ ವಿವಾದಗಳನ್ನು ಮರೆತು ಸಾಮೂಹಿಕ ರಕ್ಷಣೆಯ ಸುವರ್ಣ ಶತಮಾನಕ್ಕೆ ನಾವು ಪ್ರವೇಶಿಸುವೆವು ಮತ್ತು ಭೌತಿಕ ಸಂಪನ್ಮೂಲಗಳನ್ನು ಬುದ್ಧಿವಂತಿಕೆಯಿಂದ ಉಪಯೋಗಿಸಿಕೊಳ್ಳುವೆವು ಮತ್ತು ಬಡತನ ಹಾಗೂ ಅಸಮಾನತೆಯನ್ನು ಮುಕ್ತಾಯಗೊಳಿಸಿ ಪ್ರಕೃತಿಯೊಂದಿಗೆ ಸಮರಸವನ್ನು ಸ್ಥಾಪಿಸುವೆವು ಎಂಬುದೂ ಕೈಗೂಡಿಲ್ಲ. ಶೀತಸಮರದಿಂದ ಉಂಟಾಗಿದ್ದ ಗಂಭೀರ ಪರಿಣಾಮವೇನೆಂದರೆ ಹೊಸ ಬಗೆಯ ಚಿಂತನೆಯಲ್ಲಿ ಮಾನವಕುಲದ ಉಳಿಯುವಿಕೆಗೆ ಅಗತ್ಯವಾದ ಅಂಶಗಳಲ್ಲಿ ಪರಸ್ಪರವಲಂಬಧಾರಿತ ವಿಚಾರ ಮುಖ್ಯವಾದುದು.

ಕಳೆದ ಶತಮಾನದ ರಾಜಕಾರಣಿಗಳಾದ ನಾವು ಅಣುಶಕ್ತಿ ಆಧಾರಿತ ಯುದ್ಧದ ಅಪಾಯವನ್ನು ತಪ್ಪಿಸಿದೆವು. ಆದರೆ ಇಂದಿಗೂ ಕೂಡ ಜಗತ್ತಿನಾದ್ಯಂತ ಇನ್ನೂ ಕೋಟ್ಯಾವಧಿ ಜನರಿಗೆ ಜಗತ್ತು ಸುರಕ್ಷಿತ ಸ್ಥಳವಾಗಿಲ್ಲ. ಬದಲಿಗೆ, ಅಸಂಖ್ಯಾತ ಸ್ಥಾನೀಯ ಸಂಘರ್ಷಗಳೂ ಜನಾಂಗೀಯ ಮತ್ತು ಧರ್ಮಾಧಾರಿತ ಯುದ್ಧಗಳೂ ಜಗತ್ತಿನ ಹೊಸ ರಾಜಕಾರಣದ ನಕ್ಷೆಯಲ್ಲಿ ಕಾಣಿಸಿಕೊಂಡಿವೆ. ಪರಿಣಾಮವಾಗಿ ಅಸಂಖ್ಯಾತ ಜನರು ಆ ಸಂಘರ್ಷಗಳಿಗೆ ಬಲಿಯಾಗಿದ್ದಾರೆ. ಇದು ಹೊಸ ಪೀಳಿಗೆಯ ರಾಜಕಾರಣಿಗಳ ಅತಾರ್ಕಿಕ ವರ್ತನೆ ಮತ್ತು ಬೇಜವಾಬ್ದಾರಿತನದ ಸ್ಪಷ್ಟ ನಿದರ್ಶನವಾಗಿದೆ. ಇದು ಸಾಲದೆಂಬಂತೆ ದೊಡ್ಡ ರಾಷ್ಟ್ರಗಳ ಸ್ವಯಂ ಸಂರಕ್ಷಣೆಯ ಖರ್ಚು ಶೀತಸಮರದ ಕಾಲಕ್ಕಿಂತಲೂ ಹೆಚ್ಚಾಗಿದೆ. ಶಕ್ತಿಯುತ ಶಸ್ತ್ರಾಸ್ತ್ರಗಳ ತಂತ್ರಗಾರಿಕೆಯೇ ಪುನಃ ಸಂಘರ್ಷಗಳನ್ನು ನಿವಾರಿಸುವಲ್ಲಿ ಮತ್ತು ಅಂತಾರಾಷ್ಟ್ರೀಯ

ಸಂಬಂಧಗಳಲ್ಲಿ ವ್ಯವಹರಿಸುವ ಸಾಮಾನ್ಯ ಸಂಗತಿಯಾಗಿದೆ.

ಅಯ್ಯೋ! ಕಳೆದ ಕೆಲವು ದಶಕಗಳಿಂದಲೂ ಜಗತ್ತು ಮಾನವ ಕೋಟಿಗೆ ಉತ್ತಮ ಸ್ಥಳವಾಗಿ ಪರಿವರ್ತನೆಗೊಂಡಿಲ್ಲ: ಶ್ರೀಮಂತ ಮತ್ತು ಬಡದೇಶಗಳ ಮಧ್ಯೆ ತಾರತಮ್ಯತೆ ಹಾಗೆಯೇ ಉಳಿದಿದೆ, ಇಲ್ಲವೆ ಹೆಚ್ಚಾಗಿದೆ. ಈ ಪರಿಸ್ಥಿತಿ ಉತ್ತರದ ಮತ್ತು ಅಭಿವೃದ್ಧಿಗೊಳ್ಳುತ್ತಿರುವ ದಕ್ಷಿಣದ ಮಧ್ಯೆ ಅಷ್ಟೇ ಅಲ್ಲ, ಅಭಿವೃದ್ಧಿಗೊಂಡಿರುವ ದೇಶಗಳ ಮಧ್ಯೆಯೂ ಇದೆ. ದೋಷಯುಕ್ತ ಕೇಂದ್ರೀಕೃತ ಅರ್ಥವ್ಯವಸ್ಥೆ ಮತ್ತು ಅಧಿಕಾರಶಾಹಿ ಪ್ರಣೀತ ಯೋಜನೆಯ ಮಾದರಿ ತ್ಯಾಜ್ಯಯೋಗ್ಯ ಎಂಬುದಕ್ಕೆ ರಷ್ಯಾ ಹಾಗೂ ಇನ್ನಿತರ ಸಾಮ್ಯವಾದಿ ದೇಶಗಳಲ್ಲಿಯ ಸಮಸ್ಯೆಗಳು ಸಾಕ್ಷಿಯಾಗಿವೆ. ಇಷ್ಟೇ ಅಲ್ಲ, ಆ ಮಾದರಿ ಯಾವುದೇ ಒಂದು ದೇಶ ಜಾಗತಿಕವಾಗಿ ಸ್ಪರ್ಧಾ ಸಾಮರ್ಥ್ಯ ಹೊಂದುತ್ತದೆ ಎಂದಾಗಲೀ, ಸಾಮಾಜಿಕ ನ್ಯಾಯವನ್ನಾಗಲೀ ಅಥವಾ ಜನ ಬಾಹುಳ್ಯಕ್ಕೆ ಗೌರವಯುತ ಜೀವನ ಮಟ್ಟವನ್ನು ಒದಗಿಸುತ್ತದೆ ಎಂದಾಗಲೀ ಭರವಸೆಯನ್ನೀಯಲಾರದು. ಗತಕಾಲದ ಸವಾಲುಗಳೊಂದಿಗೆ ಹೊಸ ಸವಾಲುಗಳನ್ನೂ ಸೇರಿಸಬಹುದು. ಅವುಗಳಲ್ಲಿ ಒಂದು ಭಯೋತ್ಪಾದನೆ. ಅತ್ಯಂತ ಶಕ್ತಿಶಾಲಿ ದೇಶಗಳ ಮಧ್ಯೆ ಯುದ್ಧದ ಭೀತಿ ಸಂಯಮದ ಕಡಿವಾಣ ಹಾಕದಿರುವ ಸಂದರ್ಭದಲ್ಲಿ ಭಯೋತ್ಪಾದಕತೆ ಬಡ ಮನುಷ್ಯನ ಅಣುಬಾಂಬ್ ಆಗಿ ಒದಗಿ ಬಂದಿದೆ. ಇದು ಕೇವಲ ಅಲಂಕಾರಿಕ ಭಾಷೆಯಲ್ಲ. ನೈಜ ಪರಿಸ್ಥಿತಿಯೂ ಆಗಿದೆ. ವ್ಯಾಪಕ ವಿನಾಶಶಕ್ತಿಯ ಶಸ್ತ್ರಾಸ್ತ್ರಗಳ ಅನಿಯಂತ್ರಿತ ಪ್ರಸರಣ, ಗತಿಸಿದ ಶೀತಸಮರಕಾಲದಲ್ಲಿಯ ವಿರೋಧಿ ರಾಷ್ಟ್ರಗಳ ಮಧ್ಯದಲ್ಲಿಯ ಸ್ಪರ್ಧೆ ಹಾಗೂ ಶಸ್ತ್ರಾಸ್ತ್ರಗಳ ಉತ್ಪಾದನೆಯಲ್ಲಿ ಹೊಸ ತಾಂತ್ರಿಕ ಸಾಧನೆಗಳನ್ನು ಸಾಧಿಸಬೇಕೆಂಬ ಹಂಬಲ ಮತ್ತು ಬಹುರಾಷ್ಟ್ರೀಯತೆಯ ಜಗತ್ತಿನಲ್ಲಿ ಹೊಸ ರಾಜಕೀಯ ಪಾತ್ರಧಾರಿಗಳ ಪ್ರವೇಶ ಇತ್ಯಾದಿಗಳೆಲ್ಲವೂ ಜಾಗತಿಕ ರಾಜಕಾರಣದಲ್ಲಿ ಗೊಂದಲ ಹೆಚ್ಚಿಸಲು ಕಾರಣವಾಗುತ್ತಿವೆ.

ಸಿದ್ಧಾಂತಗಳಲ್ಲಿ ಉಂಟಾಗಿರುವ ಗಂಡಾಂತರ ಆದರ್ಶಗಳಲ್ಲಿಯ ಗಂಡಾಂತರವಾಗಿ ಪರಿಣಮಿಸುವ ಭೀತಿ ಉಂಟಾಗುತ್ತಿದೆ. ಅಷ್ಟೇ ಅಲ್ಲ, ಮೌಲ್ಯಗಳನ್ನೂ ಮತ್ತು ನೀತಿಗಳನ್ನೂ ಸಹ ಈ ಭೀತಿಗೆ ಒಳಪಡಿಸಿದೆ. ಇದರಿಂದಾಗಿ ಸಾಮಾಜಿಕ ಆಕರ ಅಂಶಗಳನ್ನು ಕಳೆದುಕೊಳ್ಳುವಂತಾಗಿದೆ. ತತ್ಪರಿಣಾಮವಾಗಿ ರಾಜಕೀಯ ಕ್ಷೇತ್ರದಲ್ಲಿ ನಿರಾಶಾವಾದ ಮತ್ತು ನಿರಾಕರಣವಾದ ಬಲಿಷ್ಠಗೊಳ್ಳುತ್ತಿವೆ. ಕಾಲ್ಪನಿಕ ಆದರ್ಶಗಳ ಮೇಲೆ ಅವಲಂಬಿತವಾಗಿದ್ದ ನಿರಂಕುಶವಾದವು ಪರಿಸಮಾಪ್ತಿಗೊಂಡಿದ್ದು ೨೦ನೇ ಶತಮಾನದಲ್ಲಿ ನಾವು ಆಚರಿಸಬಹುದಾದ ಸಂತೋಷದ ಸಂಗತಿಯಾಗಿದೆ.

ಹೊಸ ಸಿದ್ಧಾಂತಗಳು ಹಳೆಯ ಸಿದ್ಧಾಂತಗಳನ್ನು ಪಕ್ಕಕ್ಕೆ ತಳ್ಳಿ ಆ ಸ್ಥಳದಲ್ಲಿ ತಾವು ಸ್ಥಾಪಿತಗೊಳ್ಳುತ್ತಿವೆ. ಈ ಪ್ರಕ್ರಿಯೆ ಪೌರ್ವಾತ್ಯ ದೇಶಗಳಲ್ಲಿಯೂ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲೂ ನಡೆಯುತ್ತಿದೆ. ಬರ್ಲಿನ್ ಗೋಡೆಯು ಕಳಚಿ ಬೀಳುವುದಕ್ಕೆ ಕಾರಣ ಕೇವಲ ಜಾಗತಿಕ ಬದಲಾವಣೆಗಳಲ್ಲ. ಬದಲಿಗೆ, ಪೌರ್ವಾತ್ಯ ದೇಶಗಳಲ್ಲಿ ಮುಖ್ಯವಾಗಿ, ರಷ್ಯ ಒಕ್ಕೂಟದಲ್ಲಿ ನಡೆದ ಪರಿಣಾಮಕಾರಿ ಹಾಗು ಜನಪ್ರಿಯ ಸುಧಾರಣಾ ಚಳುವಳಿ ಎಂಬುದನ್ನು ಅನೇಕರು ಈಗ ಮರೆಯುತ್ತಾರೆ. ಸಾಮ್ಯವಾದಿ ಪ್ರಯೋಗಗಳ ಅನೇಕ ದಶಕಗಳ ನಂತರ ಈ ಪ್ರಯೋಗವು ರಷ್ಯ ದೇಶದ ಸಮಾಜವನ್ನು ಅಂಧಕಾರದ

ಐತಿಹಾಸಿಕ ಕಿರು ಓಣಿಯಲ್ಲಿ ಕರೆದೊಯ್ದಿತು ಮತ್ತು ಸೋವಿಯತ್ ಸುಧಾರಣಾವಾದಕ್ಕೆ ಪ್ರೇರಣೆಯನ್ನು ಕೊಟ್ಟಿತು ಹಾಗು ಈ ಪ್ರೇರಣೆ ಯೂರೋಪಿನ ಪಶ್ಚಿಮ ದೇಶಗಳಿಗೂ ದೊರಕುವಂತಾಗಿತ್ತು ಎಂಬುದನ್ನು ಮರೆಯುತ್ತಾರೆ. ಆದರೆ ಪಾಶ್ಚಿಮಾತ್ಯ ಬಂಡವಾಳಶಾಹಿ ಸಿದ್ಧಾಂತವು ತನ್ನ ಹಳೆಯ ವಿರೋಧಿಗಳನ್ನು ಕಳೆದುಕೊಂಡ ಮೇಲೂ ಮತ್ತು ತನ್ನನ್ನು ಪ್ರಶ್ನಾತೀತ ವಿಜಯೀ ಸಿದ್ಧಾಂತ ಎಂಬುದಾಗಿ ಮತ್ತು ಜಾಗತಿಕ ಪ್ರಗತಿಯ ಅವತಾರವೆಂದು ಭಾವಿಸಿದ ಮೇಲೂ ಪಾಶ್ಚಿಮಾತ್ಯ ಸಮಾಜವನ್ನು ಮತ್ತು ಜಗತ್ತಿನ ಉಳಿದ ಭಾಗವನ್ನು ಇನ್ನೊಂದು ಅಂಥ ಐತಿಹಾಸಿಕ ಕಿರುಓಣಿಯಲ್ಲಿ ಅದು ತೆಗೆದುಕೊಂಡು ಹೋಗುತ್ತದೆ.

ಇಂದಿನ ಜಾಗತಿಕ ಆರ್ಥಿಕ ಗಂಡಾಂತರ ವರ್ತಮಾನದ ಪಾಶ್ಚಿಮಾತ್ಯ ಅಭಿವೃದ್ಧಿ ಮಾದರಿಯ ನ್ಯೂನತೆಗಳನ್ನು ತೋರಿಸಲು ಅಗತ್ಯವಾಗಿತ್ತು. ಈ ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿಯೊಂದೇ ಸಾಧ್ಯವೆಂದು ಅದನ್ನು ಜಗತ್ತಿನ ಮೇಲೆಲ್ಲಾ ಹೇರಲಾಗಿತ್ತು. ಅಲ್ಲದೆ, ನೌಕರಶಾಹಿ ಸಮಾಜವಾದಕ್ಕಷ್ಟೇ ಅಲ್ಲ ಆಧುನಿಕ ಸ್ವಚ್ಛಂದ ಬಂಡವಾಳವಾದಕ್ಕೂ ಕೂಡ ಪ್ರಜಾತಾಂತ್ರಿಕ ರೀತಿಯ ಭಾರೀ ಸುಧಾರಣೆಯ ಅಗತ್ಯವಿದೆ ಎಂದು ಸಹ ಗೋಚರಿಸುವಂತೆಮಾಡಿತು. ಇಂದು ಮುರಿದು ಹೋದ ಹಳೆಯ ವ್ಯವಸ್ಥೆಯ ಮಧ್ಯೆ ಕುಳಿತು ನಾವು ಯೋಚನೆ ಮಾಡುವಾಗ ಹೊಸ ಜಗತ್ತಿನ ನಿರ್ಮಾಣದ ಪ್ರಕ್ರಿಯೆಯ ಭಾಗಿದಾರರು ನಾವೆಂದು ಭಾವಿಸಬಹುದು. ಪೌರಾತ್ಯ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಯಾವೆಲ್ಲವನ್ನೂ ಸತ್ಯ ಮತ್ತು ಅನಿವಾರ್ಯ ಸಿದ್ಧಾಂತಗಳೆಂದು ಭಾವಿಸಲಾಗಿತ್ತೋ ಅವೆಲ್ಲವೂ ಆ ರೀತಿ ಇಲ್ಲವೆಂದು ಸಿದ್ಧವಾಗುತ್ತಿದೆ. ಇದರಲ್ಲಿ ಅತ್ಯಧಿಕ ಶಕ್ತಿಶಾಲಿ ಮಾರುಕಟ್ಟೆ ಮತ್ತು ಅದಕ್ಕಿಂತ ಹೆಚ್ಚಾಗಿ ಅದರಲ್ಲಿಯ ಪ್ರಜಾತಾಂತ್ರಿಕ ಸ್ವಭಾವ ಕೂಡ ಸೇರಿವೆ.

– ಅನುವಾದ : ಸು.ಕೌ

* * *

ವಂದೇ ಮಾತರಂ : ಒಗ್ಗೂಡಿಸುವ ಗೀತೆ

– ಫಿರೋಜ್ ಬಕ್ತ್ ಅಹಮದ್

ನಾನೊಬ್ಬ ಧರ್ಮನಿಷ್ಠ ಭಾರತೀಯ ಮುಸಲ್ಮಾನ. 'ವಂದೇ ಮಾತರಂ' ಹಾಡುವುದೆಂದರೆ ನನಗೆ ಪ್ರೀತಿ. ನಾನು ಆ ಗೀತೆಯ ಸಂಸ್ಕೃತ ಮೂಲವನ್ನು ಕಂಠಪಾಠ ಮಾಡಿದ್ದೇನೆ. ಈಗ ಆ ಗೀತೆ ಹಳತಾದ ಮತ್ತು ಕೊಳೆತು ಹೋದ ವಿವಾದದಲ್ಲಿ ರಾಜಕೀಯ ತುಮಲದಲ್ಲಿ ಅನಗತ್ಯವಾಗಿ ಸಿಕ್ಕಿಹಾಕಿಕೊಂಡಿದೆ. ಜಮಾಯಿತ್-ಇ-ಉಲೇಮ-ಇ-ಹಿಂದ್ ದೇವಬಂಧ್ ಎಂಬ ಸ್ಥಳದಲ್ಲಿ ನಡೆದ ತನ್ನ ವಾರ್ಷಿಕ ಸಮ್ಮೇಳನದಲ್ಲಿ ಹೊರಡಿಸಿದ ಅದೇಶವೇ ಇದಕ್ಕೆ ಕಾರಣವಾಗಿದೆ.

ವಂದೇ ಮಾತರಂ ಅದ್ಭುತ ದೇಶಾಭಿಮಾನದ ಗೀತೆ. ಈ ಗೀತೆ ಕುರಿತು ನಡೆಯುತ್ತಿರುವ ಕಟು ಚರ್ಚೆ ನನ್ನ ಬಾಲ್ಯದ ದಿನಗಳು ನೆನಪಿಗೆ ಬರುವಂತೆ ಮಾಡಿದೆ. ಆಗ ನಾವು ಬಾಲಕರು ತುಂಬ ಎತ್ತಿದ ಧ್ವನಿಯಲ್ಲಿ ವಂದೇ ಮಾತರಂ ಹೇಳುತ್ತಿದ್ದೆವು. ಆ ಗೀತೆಯನ್ನು ನಾನು ಹಾಡದೆ ಹೋಗಿದ್ದರೆ ಉತ್ತಮ ಮುಸಲ್ಮಾನ ಆಗುತ್ತಿದ್ದೆನೆ? ಮಗು ಯಾವ ಹಾಡು ಹಾಡಿದರೇನು? ಅದರಿಂದೇನು ತೊಂದರೆ? ಅಧ್ಯಾಪಕರು ಹೇಳಿದಂತೆ ಮಕ್ಕಳು ಮಾಡುವುದಕ್ಕೆ ಅವಕಾಶ ಕೊಡಬೇಕು. ಆ ಗೀತೆಯ ಮೊದಲಿನ ಎರಡು ಚರಣಗಳು ಇಸ್ಲಾಂ ಧರ್ಮದ ಸಿದ್ಧಾಂತಕ್ಕೆ ವಿರೋಧವಾಗಿದ್ದರೂ ಮಕ್ಕಳು ಅದನ್ನು ಹಾಡಿದರೆ ಅಲ್ಲಾ ಅವರನ್ನು ಕ್ಷಮಿಸುವನು. ಅಲ್ಲಾ ಯಾವಾಗಲೂ ಕರುಣಾಳು, ಕ್ಷಮಾಶೀಲ, ದಯಾವಂತ ಹೀಗೆಂದು ಪವಿತ್ರ ಕುರಾನ್ ಹೇಳುತ್ತದೆ. ವಿವಾದವನ್ನುಂಟುಮಾಡುವ ಕೆಲವೇ ಕೆಲ ಧರ್ಮಗುರುಗಳನ್ನು ಬಿಟ್ಟರೆ ಆ ಗೀತೆ ಉಳಿದ ಮುಸ್ಲಿಂರಿಗೆ ವಿವಾದದ ವಿಷಯವೇ ಅಲ್ಲ. ಮುಸಲ್ಮಾನರು ಮೌಲಾನ ಅಬುಲ್ ಕಲಾಂ ಅಜಾದ್‌ರ ಮಾದರಿಯನ್ನು ಅನುಸರಿಸಬೇಕು. ಮುಸ್ಲಿಂರಲ್ಲಿ ಧರ್ಮಾಧಾರಿತ ವೈವಿಧ್ಯಮಯ ರಾಜಕೀಯ ಪ್ರಜ್ಞೆ ಇದ್ದಾಗ್ಯೂ ಆಜಾದರು ದೇಶಾಭಿಮಾನವನ್ನು ಪ್ರಚುರ ಪಡಿಸುವುದರಲ್ಲಿ ಧೈರ್ಯಮೆರೆದರು. ಅವರು ಪ್ರಚುರ ಪಡಿಸುತ್ತಿದ್ದ ದೇಶಾಭಿಮಾನಕ್ಕೆ ಇಸ್ಲಾಂ ಧರ್ಮದ ಅನುಮತಿಯಿದೆಯೆಂದು ಹೇಳುತ್ತಿದ್ದರು. ವಂದೇ ಮಾತರಂ ಗೀತೆ ವೇದಾಂತದಲ್ಲಿಯ ಸತ್ಯದರ್ಶನದ ಅನೇಕ ವಿಷಯ ಇಸ್ಲಾಂ ಧರ್ಮದಲ್ಲಿಯ ಧರ್ಮೈಕ್ಯತೆ ಮತ್ತು ವಿಶ್ವಶಾಂತಿಯ ತತ್ವಗಳೊಂದಿಗೆ ಮಿಶ್ರಿತವಾಗಿರುವ ಜೈವಿಕ ಸೃಷ್ಟಿಯಾಗಿದೆ ಎಂದು ಮೌಲಾನಾ ಭಾವಿಸಿದ್ದರು. ೧೯೫೨ರಲ್ಲಿ ದಿಲ್ಲಿಯಲ್ಲಿ ಸುಪ್ರಸಿದ್ಧ ಸಂಗೀತಕಾರ ಕೃಷ್ಣಕುಮಾರ್ ವಂದೇ ಮಾತರಂ ಹಾಡಿದ್ದನ್ನು ಕೇಳಿ ಮೌಲಾನಾ ಮೆಚ್ಚಿದ್ದರು. ಅದು ಶ್ರೀಮದ್ ಗಾಂಭೀರ್ಯವುಳ್ಳದ್ದಾಗಿದೆ ಮತ್ತು ಪ್ರೇರಣಾದಾಯಿಯಾಗಿದೆ ಎಂದೂ ಹೇಳಿದ್ದರು. ಮಹಾನ್ ವ್ಯಕ್ತಿಗಳಾದ ರವೀಂದ್ರನಾಥ ಟಾಗೋರ್, ಸುರೇಂದ್ರನಾಥ ಬ್ಯಾನರ್ಜಿ, ಸತ್ಯಭೂಷಣ ಗುಪ್ತ, ಆರ್.ಎನ್.ಬೋಸ್, ಎಚ್.ಬೋಸ್ ಮತ್ತು ಇನ್ನಿತರರು ಹಾಡಿದ್ದರು. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಸಂಸ್ಥೆಯ ಉದ್ಘಾಟನೆಯ ಸಮಯದಲ್ಲಿ ಮೌಲಾನಾರವರ ಹಣೆಗೆ ಕುಂಕುಮವನ್ನು ಹಚ್ಚಲಾಯಿತು. ಅಜಾದ್‌ರು

ಹಿಂದೂಧರ್ಮಕ್ಕೆ ಮತಾಂತರಗೊಂಡರು ಎಂದು ಪಾಕಿಸ್ತಾನದ ದಿನ ಪತ್ರಿಕೆ 'ಡಾನ್' ಟಿಪ್ಪಣಿ ಮಾಡಿತು.

ಆದರೆ ಮುಸಲ್ಮಾನರು ಅಂಥ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ತನ್ನ ಧರ್ಮದಲ್ಲಿಯ ನಂಬಿಕೆ ಗಟ್ಟಿಯಾಯಿತೆಂದು ಮೌಲಾನಾ ಅಂದರು. ಮುಸಲ್ಮಾನರ ದುರಂತವೇನೆಂದರೆ ತಮ್ಮ ಧರ್ಮದ ನಿಜವಾದ ಸಿದ್ಧಾಂತಗಳು ಹಿಂದೂಧರ್ಮಕ್ಕಿಂತ ಹೆಚ್ಚು ತೆರೆದವುಗಳಾಗಿವೆ, ವಿಶಾಲವಾಗಿವೆ ಮತ್ತು ಉದಾತ್ತವಾಗಿವೆ ಎಂಬುದನ್ನು ತಿಳಿಸಲು ವಿಫಲರಾಗಿರುವರು.

ಇಸ್ಲಾಂ ಧರ್ಮದ ಅತ್ಯಂತ ನಿಕೃಷ್ಟ ವಿಮರ್ಶಕರಲ್ಲಿ ಒಬ್ಬರಾದ ಹೆಚ್.ಜಿ.ವೆಲ್ಸ್ ಪ್ರಕಾರ ವರ್ತಮಾನದಲ್ಲಿ ಇಸ್ಲಾಂ ಅತ್ಯುತ್ತಮವಾದ ಸಾಮಾಜಿಕ ವ್ಯವಸ್ಥೆಯಾಗಿದೆ. ಅದು ಅತ್ಯಂತ ವಿಶಾಲ, ನೂತನ ಮತ್ತು ಸ್ವಚ್ಛ ರಾಜಕೀಯ ವಿಚಾರವಾಗಿದೆ. ಜಗತ್ತಿನ ರಾಜಕೀಯ ಚಟುವಟಿಕೆಗಳಲ್ಲಿ ಅಂಥ ವಿಚಾರ ಬೇರೊಂದಿಲ್ಲ ಎಂದು ವೇಲ್ಸ್ ಒಪ್ಪಿದ್ದಾರೆ.

ಮೂಲಭೂತವಾದಿಗಳು ಮತ್ತು ಧರ್ಮಾಂಧ ಮುಸ್ಲಿಂ ಗುರುಗಳು ಮತ್ತು ಬುದ್ಧಿಜೀವಿಗಳು ಒಂದು ಕಡೆ ಇದ್ದರೆ ಇನ್ನೊಂದು ಕಡೆಗೆ ಅವಕಾಶವಾದಿ ಬಿ.ಜೆ.ಪಿ. ರಾಜಕಾರಣಿಗಳು ಮತ್ತು ಲೆಕ್ಕಾಚಾರದ ಕಾಂಗ್ರೆಸ್ ಪಕ್ಷ ಇವೆ. ಇವರು ಅತ್ಯಂತ ಮನಮೋಹಕವೂ ಸುಂದರವೂ ಆದ ಹಾಗು ದೇಶಾಭಿಮಾನ ಮತ್ತು ರಾಷ್ಟ್ರೀಯತೆಯ ಸೊಗಡಿನ ವಂದೇ ಮಾತರಂ ಗೀತೆಯನ್ನು ವಿವಾದದ ಇಕ್ಕಟ್ಟಿಗೆ ಸಿಕ್ಕಿಸಿದ್ದಾರೆ. ಇದೆಲ್ಲವೂ ಕೂಡ ರಾಜಕೀಯ ಲಾಭಕ್ಕಾಗಿ. ಆ ಗೀತೆಯ ಕೆಲವು ಸಾಲುಗಳಿಗಾಗಿ ಮುಸ್ಲಿಮರು ತಪ್ಪು ದಾರಿಗೆ ಹೋಗಬಾರದು. ಏಕೆಂದರೆ ಯಾರೂ ಅವರನ್ನು ನಮಿಸಲು ಹೇಳುತ್ತಿಲ್ಲ.

ಪ್ರಜ್ಞಾವಂತ ಮುಸ್ಲಿಮರ ಕೂಗು ದೃಢವಾಗಿ ಕೇಳುತ್ತಿಲ್ಲ. ಮುಸ್ಲಿಂ ಧರ್ಮವು ಪ್ರತ್ಯೇಕತೆ ಮತ್ತು ಹಿಂಸೆಯನ್ನು ಪ್ರತಿಪಾದಿಸುತ್ತದೆ ಎಂದು ಅನೇಕ ಕೂಗುಗಳು ಕೇಳಿ ಬರುತ್ತಿರುವುದರಿಂದ ಇಸ್ಲಾಂ ಧರ್ಮವು ಈಗ ಸೂಕ್ಷ್ಮವಾದ ಪರಿಶೋಧನೆಯಲ್ಲಿದೆ ವಂದೇ ಮಾತರಂ ಗೀತೆ ವಿವಾದದ ಪಟ್ಟಿಗೆ ಸೇರಿದ ಹೊಸ ವಿಷಯವಾಗಿದೆ. ಆ ಗೀತೆ ಯಾವುದೇ ಪ್ರಕಾರದ ಜಾತಿ, ಧರ್ಮ, ನಂಬಿಕೆ ಇತ್ಯಾದಿಗಳನ್ನು ಮೀರಿ ಎಲ್ಲ ಭಾರತೀಯರಿಗೆ ಸ್ವೀಕಾರ್ಹ ಗೀತೆಯಾಗಿರುವಾಗ ನನ್ನ ಸಹ ಧರ್ಮೀಯರು ಆ ಗೀತೆಯನ್ನು ಧಾರ್ಮಿಕ ವಿವಾದಕ್ಕೆ ಏಕೆ ಒಳಪಡಿಸುತ್ತಿದ್ದಾರೆ ಎಂಬುದು ನನಗೆ ಗೊತ್ತಾಗುತ್ತಿಲ್ಲ.

ಈ ಮೊದಲು ಜಮಿಯಾತ್ ವಂದೇ ಮಾತರಂ ಗೀತೆ ವಿರುದ್ಧ ಆದೇಶ ಹೊರಡಿಸಿದ್ದಾಗ ಸಂಘ ಪರಿವಾರದ ಅಂಗ ಸಂಸ್ಥೆಗಳಾದ ಶಿವಸೇನೆ, ಬಿಜೆಪಿ, ವಿಹೆಚ್‌ಪಿ ಆ ಆದೇಶವನ್ನು ರಾಷ್ಟ್ರ ವಿರೋಧಿ ಎಂದು ಕರೆದಿದ್ದವು. ಮುಸ್ಲಿಂ ಧಾರ್ಮಿಕ ಗುರುಗಳು ಅಂಥ ಆದೇಶಗಳು ನಿಷ್ಕ್ರಿಯವಾಗಿರುವ ಮತ್ತು ಉದಾಸೀನಕ್ಕೆ ಒಳಗಾಗಿರುವ ಮತ್ತು ನೇಪಥ್ಯಕ್ಕೆ ಹೋಗಿರುವ ಉಧವ್ ಠಾಕ್ರೆ, ಪ್ರವೀಣ್ ತೊಗಾಡಿಯಾ, ಮಕ್ತಾರ್ ಅಬ್ಬಾಸ್ ನಕ್ವಿ ಮುಂತಾದವರನ್ನು ಪುನಃ ಕ್ರಿಯಾಶೀಲಗೊಳಿಸುತ್ತದೆ. ಅಲ್ಲದೆ, ಇನ್ನೊಂದು ದುರ್ದೈವದ ಸಂಗತಿಯೆಂದರೆ ಜಾಮಮಸ್ಜಿದ್‌ನ ಶಾಹಿ ಇಮಾಮ್, ಮೌಲಾನಾ ಖಲೀದ್ ರಷೀದ್, ಫಿರಂಗಮಾಲಿ ಮತ್ತು ಇನ್ನಿತರರು ಮುಸ್ಲಿಮರನ್ನು ದೂಷಿಸಲು ಹಿಂದುತ್ವವಾದಿಗಳಿಗೆ ಅವಕಾಶ ಮಾಡಿಕೊಡುತ್ತಾರೆ. ನಮ್ಮ ಸ್ವಂತ ಧಾರ್ಮಿಕ ಗುರುಗಳು

ದ್ವೇಷದ ವಿಷವನ್ನು ಕಾರುವುದರ ಮೂಲಕ ಮಸ್ಲಿಮರು ಹಿಂದೂಗಳಿಗಿಂತ ಕಡಿಮೆ ದೇಶಾಭಿಮಾನಿಗಳಾಗಿದ್ದಾರೆಂಬ ಅಭಿಪ್ರಾಯ ಮೂಡುವಂತೆ ಮಾಡುತ್ತಿರುವಾಗ ತೊಗಾಡಿಯಾರವರು ಮುಸ್ಲಿಂ ವಿರೋಧಿ ಹೇಳಿಕೆಗಳನ್ನು ಕೊಟ್ಟರೆ ಅವರನ್ನೇಕೆ ದೂಷಿಸಬೇಕು? ವಿವೇಚನಾರಹಿತರಾಗಿರುವ ಧಾರ್ಮಿಕ ಗುರುಗಳ ಭಾಷಣಗಳನ್ನು ಮಾಧ್ಯಮವು ಪದೇಪದೇ ಪ್ರಚಾರಕೊಡುವುದೂ ಕೂಡ ಇದಕ್ಕೆ ಬಹಳಷ್ಟು ಕಾರಣವಾಗಿದೆ. ನನ್ನ ಸಾಹಿತಿ ಮತ್ತು ಕವಿಮಿತ್ರ ಜಾವೇದ್ ಅಖ್ತರ್ ಪ್ರಕಾರ ರಾಷ್ಟ್ರಗೀತೆಯ ಬಗ್ಗೆ ಇರುವ ವಿವಾದ ಹಳೆಯದಾಯಿತು. ಆ ಬಗ್ಗೆ ಯಾರಿಗೆ ತಕಾರಾರಿದೆಯೋ ಅವರು ಅದನ್ನು ಹಾಡದಿರಲಿ. ಜಾತ್ಯಾತೀತ, ದೇಶಾಭಿಮಾನಿ ಮತ್ತು ಉದಾರ ನೀತಿಯ ಮಸ್ಲಿಮರಿಗೆ ವೇದಿಕೆ ದೊರೆಯುವುದೇ ಇಲ್ಲ. ನಾವು ಉದಾರವಾದ ಸಮಾಜದಲ್ಲಿದ್ದೇವೆ. ಅಲ್ಲಿ ಒಬ್ಬರು ಇನ್ನೊಬ್ಬರ ಧರ್ಮವನ್ನು ಅರಿತುಕೊಳ್ಳಲು ಪ್ರೋತ್ಸಾಹಿಸಲಾಗುತ್ತದೆ. ಓರ್ವ ಹಿಂದೂ ಮಸೀದಿಗೆ ಅಥವಾ ಚರ್ಚಿಗೆ ಹೋದರೆ ಅವನು ಅಶುದ್ಧನಾಗುತ್ತಾನೆಯೇ? ಮುಸ್ಲಿಂ ಮಕ್ಕಳು ಮಿಷನರಿ ಶಾಲೆಗಳಿಗೆ ಹೋಗಿ ಬೈಬಲ್‌ನಲ್ಲಿಯ ಗೀತೆಗಳನ್ನು ಹಾಡುತ್ತಾರೆ. ಆ ಮಕ್ಕಳು ತಮ್ಮ ಧರ್ಮದಲ್ಲಿಯ ನಂಬಿಕೆ ಕಳೆದುಕೊಂಡು ಹಿಂತಿರುತ್ತಾರೆಯೇ? ಅಂದ ಮೇಲೆ 'ವಂದೇ ಮಾತರಂ' ಗೀತೆ ಯಾವ ರೀತಿಯಲ್ಲಿ ಇಸ್ಲಾಂಯೇತರ?

'ಮಾತೆ' ನಾನು ನಿನಗೆ ನಮಸ್ಕರಿಸುತ್ತೇನೆ. ನೀನು ಹರಿಯುವ ತೊರೆಗಳಿಂದ ಶ್ರೀಮಂತಳಾಗಿದ್ದೀಯೆ. ನೀನು ಪ್ರಾಕಾಶಮಾನವಾದ ಬೆಳಕಿನಿಂದ ಮಿನುಗುತ್ತಿದ್ದೀಯೆ. 'ತಾಯೆ' ನಿನಗೆ ನಮಸ್ಕರಿಸುತ್ತೇನೆ ಎಂಬೀ ಸಾಲುಗಳು ಆಪತ್ಜನಕವಾಗಿದ್ದರೆ, ಅವು ನಾವು ಬಗ್ಗಿ ನಮಸ್ಕರಿಸುವ 'ಸಿಜ್ದ್'ಗಿಂತ ಬೇರಿಯಾಗಿಲ್ಲ. ನಾವು ಅಲ್ಲಾನ ಹೊರತಾಗಿ ಬಾಗುವುದಿಲ್ಲ. ಮೂಲಭೂತವಾದಿಗಳ ಮನಸ್ಸಿನಲ್ಲಿ ಗೊಂದಲದ ಹೊರತಾಗಿ ಬೇರಿನ್ನಾವ ವಿವಾದವಿದೆ?

ಮುಸ್ಲಿಮರು ಇಸ್ಲಾಂ ಧರ್ಮದ ಪ್ರಕಾರ ಅಲ್ಲಾನ ಹೊರತಾಗಿ ಯಾರನ್ನೂ ಪೂಜಿಸುವುದಿಲ್ಲ, ಯಾರ ಮುಂದೆಯೂ ಬಾಗುವುದಿಲ್ಲ. ಆದರೆ ಅವರು ದೇಶಕ್ಕೆ ವಿಧೇಯಿಯಾಗಿದ್ದಾರೆಂಬ ಮಾತನ್ನು ಅಲ್ಲಗೆಳೆಯಲಾಗುವುದಿಲ್ಲ. ಈ ಮಾತನ್ನು ಸಿದ್ಧಪಡಿಸಲು ಯಾವ ಪ್ರಮಾಣ ಪತ್ರ ಬೇಕಿಲ್ಲ. ಭಾರತದಲ್ಲಿ ಮುಸ್ಲಿಂರ ಅಸ್ತಿತ್ವ ಹಿಂದೂಗಳೊಂದಿಗೆ ಬೆರೆತಿದೆ. ಮುಸ್ಲಿಮರು ತಮ್ಮನ್ನು ಬೇರೆ ಮಾಡಿಕೊಂಡು ತಮ್ಮದೇ ಹಳೆಯದಾದ ವಸತಿಗಳಲ್ಲಿ ಇದ್ದುಕೊಂಡು ತಮ್ಮ ಧಾರ್ಮಿಕ ಗುರುತನ್ನು ಉಳಿಸಿಕೊಳ್ಳಲು ಪ್ರಯತ್ನಿಸುವುದು ಸಾಧ್ಯವಿಲ್ಲ. ಹಿಂದೂಗಳೊಂದಿಗೆ ಸ್ನೇಹಮಾಡಿಕೊಂಡು ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದೇ ವ್ಯಾವಹಾರಿಕ ನೀತಿಯಾಗಿದೆ. ಮುಸ್ಲಿಮರು ಇಸ್ಲಾಂ ಮತ್ತು ಹಿಂದೂ ಧರ್ಮದಲ್ಲಿರುವ ಸಾಮಾನ್ಯ ವಿಷಯಗಳನ್ನು ಪತ್ತೆಹಚ್ಚಿ ಅವುಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕು. ಹಿಂದೂಗಳು ಮತ್ತು ಮುಸಲ್ಮಾನರು ಶ್ರದ್ಧೆಯುತ ಪ್ರಯತ್ನ ಮಾಡಿದಲ್ಲಿ ತಮ್ಮ ಮೂಲ ಬೇರು ಏಕಸಮನಾದ ಸಿದ್ಧಾಂತ, ಮಿಶ್ರ ಸಂಸ್ಕೃತಿ ಮತ್ತು ವಿಚಾರಗಳಿಂದ ಕೂಡಿದ್ದಾಗಿವೆ ಎಂದು ತಿಳಿದುಕೊಳ್ಳಬಲ್ಲರು.

(ಸಾಭಾರ: ಡೆಕ್ಕನ್‌ಹೆರಾಲ್ಡ್ ; ಅನು: ಸು.ಕೌ)

* * *

ಪುಸ್ತಕ ಪರಿಚಯ

ಪುಸ್ತಕದ ಹೆಸರು : ಕೊಂದವರಾರು (ನಾಟಕ)
ಲೇಖಕರು : ಪ್ರಸನ್ನ
ಪ್ರಕಾಶಕರು : ಒಂಟಿದನಿ ಪ್ರಕಾಶನ, ಕವಿ-ಕಾವ್ಯ, ಹೆಗ್ಗೋಡು -೫೭೭೪೧೭
ಬೆಲೆ : ೧೦೦ರೂ : ಪುಟಗಳು : ೧೨೦

ಸ್ವತಂತ್ರ ವಿಚಾರಶಕ್ತಿ ಮತ್ತು ಕ್ರಿಯಾಶಕ್ತಿ ಹೊಂದಿರುವ ಪ್ರಸನ್ನರವರ ಲೇಖನಿಯಿಂದ ಬಂದ ಈ ನಾಟಕ ಈಗ ತಾನೆ ಬೆಳಕು ಕಂಡಿದೆ. ಪ್ರಸನ್ನರವರು ಈಗಾಗಲೇ 'ದೇಸೀಪದ್ಧತಿ' ಮತ್ತು 'ಯಂತ್ರಗಳನ್ನು ಕಳಚೋಣ ಬನ್ನಿ' ಎಂಬ ವಿಶಿಷ್ಟ ದೃಷ್ಟಿಕೋನದ ಪುಸ್ತಕಗಳನ್ನು ಪ್ರಕಟಿಸಿ ಕನ್ನಡಿಗರನ್ನು ಚಿಂತನೆಗೆ ತೊಡಗಿಸಿದ್ದಾರೆ. ಈ ಪರಂಪರೆಯಲ್ಲಿ ಈಗ ಬಂದಿರುವ ಪುಸ್ತಕ 'ಕೊಂದವರಾರು' ನಾಟಕ ರೂಪದಲ್ಲಿದೆ. ಗಾಂಧೀಜಿಯವರ ವಿಚಾರದ ಬಗ್ಗೆ ಆಸಕ್ತಿಯಿರುವ ಪ್ರಸನ್ನರವರು ಈಗ ನಾಟಕದ ಮೂಲಕ ಗಾಂಧೀ ತತ್ವವನ್ನು ಪರಿಚಯಿಸುವ ಕೆಲಸವನ್ನು ಮಾಡಿದ್ದಾರೆ. ರಂಗಭೂಮಿ ಜನಪ್ರಿಯಗೊಳ್ಳುತ್ತಿರುವ ಈ ಕಾಲದಲ್ಲಿ ಪ್ರಸನ್ನರವರ ಈ ನಾಟಕದ ಪ್ರಯೋಗಗಳು ಕರ್ನಾಟಕದಾದ್ಯಂತ ಆಗುವವೆಂದು ಹಾರೈಸಬಹುದಾಗಿದೆ.

* * *

ಪುಸ್ತಕದ ಹೆಸರು : ರಾಷ್ಟ್ರೀಯ ಸೇವಾ ಯೋಜನೆ
ಲೇಖಕರು : ಪ್ರೊ.ಬಿ.ಕೆ.ಶಿವಣ್ಣ
ಪ್ರಕಾಶಕರು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು – ೫೭೦೦೦೬
ಬೆಲೆ : ೭೨ರೂ : ಪುಟಗಳು : ೧೭೦

ರಾಷ್ಟ್ರೀಯ ಸೇವಾ ಯೋಜನೆ ದೇಶದ ಉದ್ದಗಲಕ್ಕೂ ಎಲ್ಲ ವಿಶ್ವ ವಿದ್ಯಾನಿಲಯ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಮತ್ತು ಯುವ ಜನರ ಮಧ್ಯೆ ಸಕ್ರಿಯವಾಗಿರುವ ಯೋಜನೆ. ಸ್ವಾತಂತ್ರ್ಯ ಬಂದಾಗಿನಿಂದ ದೇಶದ ಯುವಕರನ್ನು ಗ್ರಾಮಾಭಿಮುಖ ಮಾಡಿದ ಯೋಜನೆ ಇದಾಗಿದೆ. ಈ ಯೋಜನೆಯ ಫಲವಾಗಿ ಅನೇಕ ಯುವಕರು ಒಳ್ಳೆಯ ದಾರಿ ಕಂಡುಕೊಂಡಿದ್ದಾರೆ. ಅನೇಕರಿಗೆ ಒಳ್ಳೆಯ ಭವಿಷ್ಯ ದೊರೆತಿದೆ. ಭಾರತ ಹಳ್ಳಿಗಳ ದೇಶ ಎಂಬುದನ್ನು ಯುವಕರಿಗೆ ಸದಾ ನೆನಪಿಸಿಕೊಡುತ್ತಿರುವ ಯೋಜನೆ ರಾಷ್ಟ್ರೀಯ ಸೇವಾ ಯೋಜನೆ. ಈ ಅದ್ಭುತ ಯೋಜನೆಯ ಬಗ್ಗೆ ಪೂರಕ ಮಾಹಿತಿ ಒದಗಿಸುವ ಪುಸ್ತಕಗಳು ಕನ್ನಡದಲ್ಲಿ ಇರಲಿಲ್ಲ. ಆ ಕೊರತೆಯನ್ನು ಪ್ರೊ.ಬಿ.ಕೆ.ಶಿವಣ್ಣ ನೀಗಿಸಿಕೊಟ್ಟಿದ್ದಾರೆ. ಶಿವಣ್ಣನವರು ಸ್ವತಃ ಸೇವಾ ಯೋಜನೆಯ ಸೇವಕರಾಗಿ, ಮಾರ್ಗದರ್ಶಕರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರೊ.ಶಿವಣ್ಣನವರು ಈಗಲೂ ಸೇವಾ ಯೋಜನೆಯನ್ನೇ ಉಸಿರಾಡುತ್ತಾರೆ.

* * *

ಭಯೋತ್ಪಾದನೆ: ಚಾರಿತ್ರಿಕ ಅಂಶಗಳು

– ಡಾ.ಕೆ.ಚಿದಾನಂದ ಗೌಡ

"ಮಾನವನು ಜ್ಞಾನದೊಡನೆ ವಿವೇಕವನ್ನೂ ಹೆಚ್ಚಿಸಿಕೊಳ್ಳದಿದ್ದರೆ, ಜ್ಞಾನದ ಹೆಚ್ಚಳವು ದುಃಖದ ಹೆಚ್ಚಳವನ್ನು ಉಂಟುಮಾಡುತ್ತದೆ." – *ಬರ್ಟ್ರಾಂಡ್ ರಸೆಲ್*

ಬರ್ಟ್ರಾಂಡ್ ರಸೆಲ್ ಹೇಳುವಂತೆ ಜಗತ್ತಿನಲ್ಲಿ ಮೂರು ವಿಧಗಳ ತಿಕ್ಕಾಟಗಳು ನಡೆಯುತ್ತಿರುತ್ತವೆ.

೧. ಮಾನವ ಮತ್ತು ಮಾನವನ ನಡುವೆ ತಿಕ್ಕಾಟ
೨. ಮಾನವ ಮತ್ತು ಪ್ರಕೃತಿಯ ನಡುವೆ ತಿಕ್ಕಾಟ
೩. ಮಾನವ ಮತ್ತು ಅವನದೇ ಅಂತರಂಗದ ನಡುವೆ ತಿಕ್ಕಾಟ

ಈ ತಿಕ್ಕಾಟಗಳಲ್ಲಿ, ಮಾನವನ ದೃಷ್ಟಿಕೋನದಿಂದ, ಭಯೋತ್ಪಾದನೆಗೆ ಮುಖ್ಯವಾಗಿ ಕಾರಣವಾದವುಗಳು:

- ಮಾನವ ಮತ್ತು ಮಾನವನ ನಡುವೆ ತಿಕ್ಕಾಟ
- ಮಾನವ ಮತ್ತು ಅವನದೇ ಅಂತಂರಂಗದ ನಡುವೆ ತಿಕ್ಕಾಟ
- ಮಾನವ ಮತ್ತು ಪ್ರಕೃತಿಯ ನಡುವೆ ತಿಕ್ಕಾಟ

ಮಾಸ್ಲೋ ಸಿದ್ಧಾಂತ

ಈ ಸಿದ್ಧಾಂತವು ಮಾನವನ ಅವಶ್ಯಕತೆ ಮತ್ತು ಪ್ರೇರಣೆಗಳ ಕುರಿತಾಗಿದೆ:

ಮನಶಾಸ್ತ್ರಜ್ಞ ಮಾಸ್ಲೋನ ಪ್ರಕಾರ, ಮಾನವನು ಪಡೆಯುವ ಪ್ರೇರಣೆಗಳು ಕೆಳಸ್ತರದಿಂದ ಪ್ರಾರಂಭವಾಗಿ ಹೀಗಿರುತ್ತವೆ:

- ಭೌತಿಕ ಮತ್ತು ಶಾರೀರಿಕ ಅವಶ್ಯಕತೆಗಳು
- ರಕ್ಷಣೆ ಮತ್ತು ಸಮಾಜದ ಸದಸ್ಯತ್ವದ ಅವಶ್ಯಕತೆ
- ಸಾಧನೆ ಮತ್ತು ಮನ್ನಣೆಯ ಅವಶ್ಯಕತೆ
- ಆತ್ಮಶಕ್ತಿಯ ಪ್ರಾತ್ಯಕ್ಷಿತೆ

ಇವುಗಳಲ್ಲಿ ಒಂದು ಅಥವಾ ಹೆಚ್ಚು ಲಭಿಸದಿದ್ದಾಗ ಮಾನವ ಭಯೋತ್ಪಾದಕನಾಗುತ್ತಾನೆ.

ಭೌತಿಕ ಪ್ರಾಬಲ್ಯ, ಸ್ಪರ್ಧೆ ಮತ್ತು ಹಿಂಸೆ

ಭೌತಿಕ ಪ್ರಾಬಲ್ಯ ಮತ್ತು ಅಧಿಪತ್ಯದ ಅವಶ್ಯಕತೆಯು ಜೀವನದಲ್ಲಿ ಸ್ಪರ್ಧೆಯನ್ನುಂಟುಮಾಡುತ್ತದೆ.

ಸ್ಪರ್ಧೆಯು ಸಂಬಂಧಗಳ ಮೇಲೆ ಪ್ರಭಾವ ಬೀರುತ್ತದೆ ಮತ್ತು ಹಿಂಸೆಗೆ ಕಾರಣವಾಗುತ್ತದೆ:

- ಗಂಡ ಹೆಂಡಿರ ನಡುವೆ

- ಸೋದರ ಸೋದರಿಯರ ನಡುವೆ
- ಧರ್ಮ ಧರ್ಮಗಳ ನಡುವೆ
- ಉದ್ಯಮಗಳ ನಡುವೆ
- ದೇಶ ದೇಶಗಳ ನಡುವೆ

ತಾತ್ವಿಕ ಭಿನ್ನಾಭಿಪ್ರಾಯಗಳು ಮತ್ತು ಹಿಂಸೆ

ಸಮಾಜ ಸಮಾಜಗಳ ನಡುವಣ ತಾತ್ವಿಕ ಭಿನ್ನಾಭಿಪ್ರಾಯಗಳು ಹಿಂಸೆಗೆ ಕಾರಣವಾಗುವುದಿದೆ:

- ಕ್ಯಾಪಿಟಲಿಸಂ ಮತ್ತು ಕಮ್ಯೂನಿಸಂ
- ಧರ್ಮ ಧರ್ಮಗಳು
- ಜಾತಿ ಜಾತಿಗಳು
- ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟಾಂಟ್
- ಅರಬರು ಮತ್ತು ಯಹೂದಿಗಳು

ತಾತ್ವಿಕ ಭಿನ್ನಾಭಿಪ್ರಾಯಗಳಿಂದ ಮಲಿನವಾದ ಮನಸ್ಸುಗಳಿಂದ ಹಿಂಸೆಗಳು ಎಲ್ಲೆಲ್ಲೂ ಕಾಣಿಸಿಕೊಳ್ಳಬಹುದು:

- ಗಾಂಧೀಜಿಯವರನ್ನು ದಕ್ಷಿಣ ಆಫ್ರಿಕಾದಲ್ಲಿ ರೈಲಿನಿಂದ ತಳ್ಳಿದ್ದು
- ಅಂಬೇಡ್ಕರ್ ಅವರನ್ನು ಕುದುರೆಗಾಡಿಯಿಂದ ಹೊರಗೆಳದದ್ದು
- ವಿಯಟ್‌ನಾಮ್ ಮೇಲೆ ಆಕ್ರಮಣ ಮಾಡಿದ್ದು
- ತಿಯಾನ್‌ಮನ್ ಸ್ಕ್ವೇರ್‌ನಲ್ಲಿ ಗುಂಡುಹಾರಿಸಿದ್ದು
- ಅಫಘಾನಿಸ್ತಾನದಲ್ಲಿ ಬುದ್ಧನ ವಿಗ್ರಹ ನಾಶಮಾಡಿದ್ದು
- ಅಮೇರಿಕಾದ ೯/೧೧ ಘಟನೆ
- ಭಾರತದ ೨೬/೧೧ ಘಟನೆ

ರಾಮಾಯಣದಲ್ಲಿ ಭಯೋತ್ಪಾದನೆ

ಮಾರೀಚ ಮತ್ತು ಸುಬಾಹು: ವಿಶ್ವಾಮಿತ್ರ ಮುನಿಗಳ ಆಶ್ರಮದಲ್ಲಿ, ಪ್ರಾಯಶಃ ತಾತ್ವಿಕ ಭಿನ್ನಾಭಿಪ್ರಾಯಗಳಿಂದಾಗಿ ಯಜ್ಞಕುಂಡಕ್ಕೆ ಮಾಂಸ, ರಕ್ತಗಳನ್ನು ಸುರಿದು ಭಯೋತ್ಪಾದನೆಗೆ ಕಾರಣವಾಗಿದ್ದರು.

ಮಹಾಭಾರತದಲ್ಲಿ ಭಯೋತ್ಪಾದನೆ

ಬಕಾಸುರ ಏಕಚಕ್ರಪುರದಲ್ಲಿ: ಭೌತಿಕ ಆಹಾರದ ಅವಶ್ಯಕತೆಗಾಗಿ ಭಯೋತ್ಪಾದಕನಾಗಿದ್ದ.

ಪುರಾಣಗಳಲ್ಲಿ ಭಯೋತ್ಪಾದನೆ

ಭಸ್ಮಾಸುರ ಇತರರ ತಲೆಯಮೇಲೆ ಕೈಯಿಟ್ಟು ಭಸ್ಮಮಾಡುವ ವರವನ್ನು ಈಶ್ವರನಿಂದ ಪಡೆದು, ಭಯೋತ್ಪಾದಕನಾಗಿದ್ದ.

ಭಗವಾನ್ ಬುದ್ಧನ ಕಾಲದಲ್ಲಿ ಭಯೋತ್ಪಾದನೆ

ಅಂಗೂಲಿಮಾಲ ಜನರನ್ನು ಕೊಂದು, ಅವರ ಬೆರಳುಗಳ ಮಾಲೆಯನ್ನು ಶಿರದಲ್ಲಿ ಧರಿಸಿ ಭಯೋತ್ಪಾದಕನಾಗಿದ್ದ.

ಮಾನವ ಮತ್ತು ಮಾನವರ ತಿಕ್ಕಾಟಗಳು

೩,೦೦೦ ವರ್ಷಗಳ ಇತಿಹಾಸದಲ್ಲಿ ೧೫,೦೦೦ ಯುದ್ಧಗಳು ನಡೆದಿವೆ. ಎಂದರೆ, ಪ್ರತಿವರ್ಷ ಸರಾಸರಿ ೫ ಯುದ್ಧಗಳು ನಡೆದಿವೆ. ೩,೦೦೦ ವರ್ಷಗಳ ಇತಿಹಾಸದಲ್ಲಿ ೩೦೦ ವರ್ಷಗಳು ಮಾತ್ರ ಯುದ್ಧಗಳಿರಲಿಲ್ಲ.

ಈ ೩೦೦ ವರ್ಷಗಳು ಕೂಡ ಒಂದೇ ತುಣುಕಲ್ಲ, ಒಟ್ಟಿಗೇ ಅಲ್ಲ. ಶಾಂತಿಯ ಈ ೩೦೦ ವರ್ಷಗಳು ಮುಂದಿನ ಯುದ್ಧದ ತಯಾರಿಯ ಸಮಯವಾಗಿದ್ದವು. ಏನಿದರ ಅರ್ಥ? ಮಾನವರು ಮೂಲತಃ ತಿಕ್ಕಾಟ ಪ್ರಿಯರೇ?

– ೧ನೇ ಮಹಾಯುದ್ಧದ ಖರ್ಚು ೩೩೮ ಬಿಲಿಯನ್ ಡಾಲರ್‌ಗಳು.

– ೨ನೇ ಮಹಾಯುದ್ಧದ ಖರ್ಚು ೪,೦೦೦ ಬಿಲಿಯನ್ ಡಾಲರ್‌ಗಳು.

– ೩ನೇ ಮಹಾಯುದ್ಧ ನಡೆಯಬಹುದೇ ಎಂದೊಬ್ಬರು ಮಹಾವಿಜ್ಞಾನಿ ಐನ್‌ಸ್ಟೈನ್ ಅವರನ್ನು ಕೇಳಿದಾಗ ಅವರೆಂದರು: "೩ನೇ ಮಹಾಯುದ್ಧದ ಕುರಿತು ನಾನೇನೂ ಹೇಳಲಾರೆ; ಆದರೆ ೪ನೇ ಮಹಾಯುದ್ಧ ನಡೆಯಲಾರದೆಂದೇ ನಾನು ಹೇಳುತ್ತೇನೆ; ಯಾಕೆಂದರೆ ೩ನೇ ಮಹಾಯುದ್ಧವಾದಾಗ ಸಂಪೂರ್ಣ ವಿಶ್ವವೇ ನಾಶವಾಗಿರುತ್ತದೆ."

– ಇಂದು ಯುದ್ಧ ಸಿದ್ಧತೆಗಾಗಿ ಜಗತ್ತು ಒಂದು ಮಿನಿಟಿಗೆ ಒಂದೂವರೆ ಮಿಲಿಯನ್ ಡಾಲರ್ ಖರ್ಚು ಮಾಡುತ್ತಿದೆ.

– ಒಂದು ನ್ಯೂಕ್ಲಿಯರ್ ಯುದ್ಧ ವಿಮಾನದ ಹಣದಿಂದ ೧೦೦ ಹಾಸಿಗೆಗಳ ೭೫ ಆಸ್ಪತ್ರೆಗಳನ್ನು ಕಟ್ಟಬಹುದು.

– ಒಂದು ನ್ಯೂಕ್ಲಿಯರ್ ಸಬ್‌ಮೆರೀನ್ ಹಣದಿಂದ ೪೦,೦೦೦ ಮನೆಗಳನ್ನು ಕಟ್ಟಬಹುದು.

– ತಲಾ ೨೫೦ ಮಂದಿಗೆ ಒಬ್ಬ ಸೈನಿಕನಿದ್ದಾನೆ; ೩,೭೦೦ ಮಂದಿಗೆ ಒಬ್ಬ ವೈದ್ಯನಿದ್ದಾನೆ.

– ಒಬ್ಬ ಸೈನಿಕನ ತರಬೇತಿಗೆ ವರ್ಷಕ್ಕೆ ತಗಲುವ ಖರ್ಚು ೧೬,೦೦೦ ಡಾಲರ್; ಆದರೆ ಒಬ್ಬ ಶಾಲಾವಿದ್ಯಾರ್ಥಿಯ ಶಿಕ್ಷಣಕ್ಕೆ ಬರೇ ೨,೬೦೦ ಡಾಲರ್.

ಜೀವಂತವಿರುವ ನೆರೆಯವರಿಗೆ ನೆರವು ನೀಡುವ ಬದಲು, ಅಸ್ತಿತ್ವದಲ್ಲಿರದ ಕಾಲ್ಪನಿಕ ವೈರಿಯ ವಿನಾಶದತ್ತ ಮಾನವನ ದೃಷ್ಟಿ.

ಅಮೇರಿಕಾದ ಜೋ ಎಂಬುವನು ತನ್ನ ಶ್ರೇಷ್ಠ ಕುರಿಯೊಂದರ ರಕ್ಷಣೆಗಾಗಿ ಯುದ್ಧ ಪ್ರಾರಂಭಿಸಿ, ಕೊನೆಗೆ ಕುರಿಯನ್ನೇ ಮನೆಯಿಂದ ಹೊರದೂಡಿ, ಯುದ್ಧ ಮುಂದುವರಿಸಿದಂತೆ, ಇರುವವು ಯುದ್ಧದ ಕಾರಣಗಳು.

ನಲಂದಾ ವಿಶ್ವವಿದ್ಯಾನಿಲಯದಲ್ಲಿ ಭಯೋತ್ಪಾದನೆ

೧,೫೦೦ ವರ್ಷಗಳಷ್ಟು ಹಳೆಯ ನಲಂದಾ ವಿಶ್ವವಿದ್ಯಾನಿಲಯದಲ್ಲಿ ೩,೦೦೦ ಮಂದಿ ವಿದ್ಯಾರ್ಥಿಗಳು ಮತ್ತು ೧,೦೦೦ ಮಂದಿ ಅಧ್ಯಾಪಕರಿದ್ದರು.

ಅಲ್ಲಿ ಚೀನಾ, ಟಿಬೆಟ್, ಕೊರಿಯಾ, ಜಪಾನ್, ಜಾವಾ, ಕಂಬೋಡಿಯಾ, ಬರ್ಮಾ, ಸಿಲೋನ್, ಥೈಲಾಂಡ್ ಮತ್ತು ಮಧ್ಯ ಏಷ್ಯಾದಿಂದ ಬಂದ ವಿದೇಶೀ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿದ್ದರು.

೧೨೦೫ರಲ್ಲಿ ಖಿಲ್ಜಿ ನೇತೃತ್ವದಲ್ಲಿ ಬರೇ ೧೮ ಮಂದಿ ದುಷ್ಟರು ಬಂದು ನಲಂದಾವನ್ನು ಸಂಪೂರ್ಣ ಧ್ವಂಸಮಾಡಿ ಬೆಂಕಿ ಹಚ್ಚಿದರು. ಅಲ್ಲಿಯ ಅಮೂಲ್ಯ ಪುಸ್ತಕಾಲಯಕ್ಕೆ ಹಚ್ಚಿದ ಬೆಂಕಿ ೬ ತಿಂಗಳು ಉರಿದು ಅಮೂಲ್ಯವಾದ ಓಲೆಗರಿಯ ಹೊತ್ತಗೆಗಳನ್ನು ಭಸ್ಮಮಾಡಿತು.

ಮಾನವ ಮತ್ತು ಅವನದೇ ಅಂತರಂಗದ ನಡುವೆ ತಿಕ್ಕಾಟ

ಮನಸ್ಸು ಮತ್ತು ಬುದ್ಧಿಗಳ ನಡುವೆ ತಿಕ್ಕಾಟ:

ಪಂಚೇಂದ್ರಿಯಗಳಿಂದ ಸೆಳೆಯಲ್ಪಡುವ 'ಮನಸ್ಸು' ಮತ್ತು 'ಅಹಂ' ಇದರಿಂದ ಪ್ರೇರಿತವಾಗುವ 'ಬುದ್ಧಿ' ಇವುಗಳ ನಡುವೆ ನಿತ್ಯ ಕುರುಕ್ಷೇತ್ರ ಯುದ್ಧ ನಡೆಯುತ್ತಿರುತ್ತದೆ. ಮನಸ್ಸು ಮಾಡು ಎನ್ನುತ್ತದೆ; ಬುದ್ಧಿ ಬೇಡ ಎನ್ನುತ್ತದೆ; ಬುದ್ಧಿ ಮಾಡು ಎನ್ನುತ್ತದೆ; ಮನಸ್ಸು ಬೇರೆತ್ತಲೋ ಹರಿಯುತ್ತದೆ. ಪರೀಕ್ಷೆ ಹತ್ತಿರಬಂತು, ಚೆನ್ನಾಗಿ ಓದು ಎನ್ನುತ್ತದೆ ಬುದ್ಧಿ; ಕ್ರಿಕೆಟ್ ಆಟ ನೋಡು ಎನ್ನುತ್ತದೆ ಮನಸ್ಸು. ಹೆಂಡ ಕುಡಿ ಎನ್ನುತ್ತದೆ ಮನಸ್ಸು; ಹೆಂಡತಿ ಮಕ್ಕಳು ಉಪವಾಸ ಇರಬೇಕಾಗುತ್ತದೆ ಎನ್ನುತ್ತದೆ ಬುದ್ಧಿ. ವಿಶ್ವದಲ್ಲಿ ಒಬ್ಬನೇ ದೇವರು ಇರುವುದು ಸಾಧ್ಯ ಎನ್ನುತ್ತದೆ ಬುದ್ಧಿ; ಇತರರ ದೇವಾಲಯಗಳನ್ನು ನಾಶಮಾಡು ಎನ್ನುತ್ತದೆ ಮನಸ್ಸು.

ಮಾನವ ಮತ್ತು ಪ್ರಕೃತಿಯ ತಿಕ್ಕಾಟ

ಭೂಮಿ:

ಭೂಮಿಯು ಜೀವಸಂಕುಲ ಧಾರಿಣಿ. ಉಪನಿಷತ್ತಿನ ಒಂದು ಸುಂದರ ಶ್ಲೋಕ ಹೀಗಿದೆ:

"ಇಯಂ ಪೃಥ್ವೀ ಸರ್ವೇಷಾಂ ಭೂತಾನಾಂ ಮಧುಃ

ಅಸ್ಯೈ ಪೃಥಿವ್ಯೈ ಸರ್ವಾಣಿ ಭೂತಾನಿ ಮಧುಃ" ಎಂದರೆ, ಈ ಭೂಮಿಯು ಎಲ್ಲಾ ಜೀವಿಗಳಿಗೆ ಸಿಹಿ ಜೇನು; ಈ ಭೂಮಿಗೆ ಎಲ್ಲಾ ಜೀವಿಗಳು ಸಿಹಿ ಜೇನು. ಜಯ್ಯಾ ಹೈಪೋಥೆಸಿಸ್: ಜೇಮ್ಸ್ ಲವ್‌ಲಾಕ್ ಪ್ರಕಟಿಸಿರುವ ಈ ಊಹಾವಾದವು ಭಾರತದ ಭೂಮಿತಾಯಿಯ ಕಲ್ಪನೆಯಂತೆ. ಗ್ರೀಕಿನಲ್ಲಿ ಜಯ್ಯಾ ಎಂದರೆ ಭೂಮಿ. ಲವ್‌ಲಾಕ್‌ನ ಪ್ರಕಾರ, ಸಜೀವ ಮರದ ಜೀವ ನಿರ್ಜೀವ ಭಾಗಗಳಂತೆ, ಭೂಮಿಯ ಜೀವ ನಿರ್ಜೀವಗಳು ಸೇರಿ, ಭೂಮಿ ಸಜೀವಿ, ಆಕೆ ಭೂದೇವಿ. ರಾಸಾಯನಿಕ ವಸ್ತುಗಳಿಂದ ಮಣ್ಣನ್ನು ನಿಸ್ಸತ್ವಗೊಳಿಸಿದ್ದೇವೆ, ವಿಪರೀತ ಪ್ಲಾಸ್ಟಿಕ್ ಬಳಸಿ, ಮಲಿನತೆ ಹೆಚ್ಚಿಸಿದ್ದೇವೆ, ಸಸ್ಯ ಮತ್ತು ಪ್ರಾಣಿಪಕ್ಷಿಗಳ ಸಂತತಿ ನಾಶಮಾಡಿದ್ದೇವೆ. ಭೂಮಿಯಲ್ಲಿ ಸಸ್ಯಗಳ ಮೂಲ ನೆಲೆಯ ೮೦% ಭಾಗವನ್ನು ಭಾರತ ಕಳಕೊಂಡಿದೆ. ಭಾರತದ ಹೂಗಿಡಗಳ ೧೦% ಭಾಗ (೨,೦೦೦ ಜಾತಿಗಳು) ನಶಿಸಿ ಹೋಗುವ ಅಪಾಯದ ಅಂಚಿನಲ್ಲಿವೆ.

ನಶಿಸಿಹೋಗುವ ಒಂದು ಸಸ್ಯವು ತನ್ನೊಡನೆ ೧೦-೩೦ ಸಂಖ್ಯೆಯ

ಅವಲಂಬೀ ಕೀಟ, ಪ್ರಾಣಿ, ಮತ್ತಿತರ ಸಸ್ಯ ಜಾತಿಗಳನ್ನು ನಾಶದತ್ತ ಒಯ್ಯುತ್ತದೆ. ದಕ್ಷಿಣ ಭಾರತದಲ್ಲಿ ೩೬ ಪ್ರಮುಖ ಔಷಧೀಯ ಸಸ್ಯ ಜಾತಿಗಳು ನಾಶದ ಅಂಚಿನಲ್ಲಿವೆ.

ನೀರು:

ನದಿ ಮತ್ತು ಸಮುದ್ರ ಮಾಲಿನ್ಯ ಮಾಡುತ್ತಿದ್ದೇವೆ.
ಮಲಿನ ಜಲದಿಂದ ಅನಾರೋಗ್ಯ ಉಂಟಾಗುತ್ತದೆ.
ಜಲಜೀವಿಗಳ ವಿನಾಶವಾಗುತ್ತದೆ.

ಗಾಳಿ:

ಇದು ಪ್ರಾಣವಾಯು ಎನಿಸುತ್ತದೆ.

ವಾಹನ, ಕಾರ್ಖಾನೆಗಳಿಂದ ಹೊರಬರುವ ಧೂಮದಿಂದ ಮಾಲಿನ್ಯ ಹೆಚ್ಚಾಗುತ್ತಿದೆ.

ಆಕಾಶ:

ಮಳೆ ಮೋಡಗಳ ನಿಲ್ದಾಣ ಇದಾಗಿದೆ.
ಉಲ್ಕೆಗಳಿಂದ ಇದು ರಕ್ಷಣೆ ನೀಡುತ್ತದೆ.
ಓಜೋನ್ ಪದರಿನಲ್ಲಿ ತೂತು ಉಂಟಾಗಲು ಮನುಕುಲ ಕಾರಣವಾಗಿದೆ.
ಹಾಳಾದ ಕೃತಕ ಉಪಗ್ರಹಗಳ ನಿಲ್ದಾಣ ಕೂಡ ಆಗಿದೆ ಆಕಾಶ.

ಬೆಂಕಿ:

ಬೆಂಕಿಯನ್ನು ಮಾನವ ಮಲಿನಗೊಳಿಸಲಾರ. ಆದರೆ ಅದರ ದುರ್ಬಳಕೆಯಿಂದ ಮಾಲಿನ್ಯ ಉಂಟುಮಾಡುತ್ತಾನೆ.

ಜ್ಞಾನ ಮತ್ತು ವಿವೇಕಗಳ ತಿಕ್ಕಾಟ: ರಸೆಲ್

ಸಮಾಜದ ಮೇಲೆ ವಿಜ್ಞಾನದ ಪರಿಣಾಮ ಎಂಬ ತನ್ನ ಪುಸ್ತಕದಲ್ಲಿ ಬರ್ಟ್ರಾಂಡ್ ರಸೆಲ್ ಹೀಗೆ ಬರೆಯುತ್ತಾರೆ: "ಮಾನವನ ಕೌಶಲ ಎಂಬ ದಾರಿ ಮತ್ತು ಮಾನವನ ಅವಿವೇಕ ಎಂಬ ಗುರಿಗಳ ಒಂದು ಓಟದ ಸ್ಪರ್ಧೆಯ ನಡುವೆ ನಾವಿದ್ದೇವೆ; ಸಾಕಷ್ಟು ಅವಿವೇಕಪೂರ್ಣ ಗುರಿ ಇರಿಸಿಕೊಂಡಾಗ, ಅವುಗಳನ್ನು ಮುಟ್ಟಲು ಹೆಚ್ಚಿಸಿಕೊಳ್ಳಬೇಕಾದ ಕೌಶಲ್ಯಗಳೆಲ್ಲಾ ದೋಷಪೂರ್ಣ ಆಗಿರುತ್ತವೆ. ಅಜ್ಞಾನ ಮತ್ತು ಅನರ್ಹತೆಗಳಿಂದಲೇ ಮನುಕುಲವಿಂದು ಉಳಿದುಬಂದಿದೆ. ಜ್ಞಾನ, ಅರ್ಹತೆ ಮತ್ತು ಅವಿವೇಕಗಳು ಒಟ್ಟಾಗಿ ಸೇರಿದಾಗ ಮನುಕುಲಕ್ಕೆ ಉಳಿಗಾಲವಿಲ್ಲ. ಜ್ಞಾನವು ಶಕ್ತಿ ಎಂಬುದೇನೋ ನಿಜ; ಆದರೆ ಈ ಶಕ್ತಿಯನ್ನು ಬಳಸಿ ಎಷ್ಟು ಒಳ್ಳೆಯದನ್ನು ಮಾಡಬಹುದೋ ಅಷ್ಟೇ ಪ್ರಮಾಣದ ಕೆಟ್ಟದ್ದನ್ನೂ ಮಾಡಬಹುದು. ಇದರ ಅರ್ಥವೇನೆಂದರೆ, ಮಾನವನು ಜ್ಞಾನದೊಡನೆ ವಿವೇಕವನ್ನೂ ಹೆಚ್ಚಿಸಿಕೊಳ್ಳದಿದ್ದರೆ, ಜ್ಞಾನದ ಹೆಚ್ಚಳವು ದುಃಖದ ಹೆಚ್ಚಳವನ್ನು ಉಂಟುಮಾಡುತ್ತದೆ."

ಮನುಕುಲವಿಂದು ವಿಷಮ ಸ್ಥಿತಿಯಲ್ಲಿದೆ:

ಮಾನವನು ವ್ಯಷ್ಟಿಯ ಹಂತದಲ್ಲಿ ಅಸಮತೋಲನದಲ್ಲಿದ್ದಾನೆ: ಅವನು ಬೌದ್ಧಿಕವಾಗಿ ತ್ರಿವಿಕ್ರಮನೂ, ಮಾನಸಿಕವಾಗಿ ವಾಮನನೂ, ಭೌತಿಕವಾಗಿ ಕುಬೇರನೂ, ನೈತಿಕವಾಗಿ ಕುಚೇಲನೂ, ಜ್ಞಾನದಲ್ಲಿ ಆನೆಯೂ, ವಿವೇಕದಲ್ಲಿ ಇಲಿಯೂ ಆಗಿದ್ದಾನೆ. ಹೀಗಾಗಿ ಮಾನವನು ಸಮಷ್ಟಿಯ ಹಂತದಲ್ಲಿ ಹೆಚ್ಚೆಚ್ಚು ಉದ್ವೇಗಕ್ಕೆ ಈಡಾಗುತ್ತಿದ್ದಾನೆ. ಇದರಿಂದಾಗಿ ವಿಶ್ವದಲ್ಲಿ ಅಶಾಂತಿಯು ಹೆಚ್ಚಾಗಿ ಮಾನವನ ಮನಸ್ಸಿಗೆ ಕ್ಷೋಭೆಯ ಅಲೆಗಳು ಬಂದು ಅಪ್ಪಳಿಸುತ್ತಿವೆ.

ಸಮಗ್ರ ಸಾತ್ವಿಕ ಕ್ರಾಂತಿ

ಭಯೋತ್ಪಾದನೆಯ ತಡೆಗೆ ಸಮಗ್ರ ಸಾತ್ವಿಕ ಕ್ರಾಂತಿ ಆಗಬೇಕಾಗಿದೆ. ಪರಿಹಾರದ ಪ್ರಕ್ರಿಯೆಯು ವ್ಯಷ್ಟಿಯ ಹಂತದಲ್ಲಿ ನಮ್ಮಲ್ಲಿ ಪ್ರತಿಯೊಬ್ಬರ ಆಂತರ್ಯದಿಂದ ಪ್ರಾರಂಭವಾಗಬೇಕು. ಈ ಜಗತ್ತಿನಲ್ಲಿ ಪ್ರತಿಯೊಂದೂ ಎರಡು ಬಾರಿ ಸೃಷ್ಟಿಸಲ್ಪಡುತ್ತದೆ: ಮೊದಲು ಮಾನಸಿಕ ಲೋಕದಲ್ಲಿ, ಬಳಿಕ ಭೌತಿಕ ಲೋಕದಲ್ಲಿ; ಭಾವಲೋಕದಲ್ಲಿ ಬಾರದ್ದು ಭವಲೋಕದಲ್ಲಿ ಬರುವುದಿಲ್ಲ. ಭಾವಲೋಕದಲ್ಲಿ ವಿಷಯವೊಂದು ಸ್ಪಷ್ಟವಾಗಿ ಮೂಡಲು ಚಿಂತನ ಮಂಥನಗಳು ನಡೆಯಬೇಕು. ವಿವೇಕಿಯಾಗಲು ಒಬ್ಬ ತನ್ನ ವೈಯಕ್ತಿಕ ನಂಬಿಕೆ, ಪೂರ್ವಾಗ್ರಹಗಳನ್ನು ಬದಿಗಿರಿಸಿ, ವಿಭಿನ್ನ ಕ್ಷೇತ್ರಗಳಿಂದ ಹೊಸಹೊಸ ಜ್ಞಾನಗಳನ್ನು ಪಡೆದು, ವಿಷಯಗಳ ಆಳಕ್ಕೆ ಇಳಿದು, ಅಂತರೀಕ್ಷಣೆ ಮಾಡಿ, ಪರಿಣಾಮಗಳಿಂದ ಕಾರಣಗಳತ್ತ ನಡೆದು, ಮುಕ್ತ ಮನಸ್ಸಿನಿಂದ ಯೋಚನೆಗಳನ್ನು ಹರಿಯಬಿಡುವುದು ಅಗತ್ಯ. ಅದು ವ್ಯಷ್ಟಿಯ ಹಂತದಲ್ಲಿ ಸಾತ್ವಿಕ ಕ್ರಾಂತಿಯಾಗಿ ಕೊನೆಗೊಳ್ಳಬೇಕು.

ಸಮಗ್ರ ಸಾತ್ವಿಕ ಕ್ರಾಂತಿಯ ವಿಧಾನ

ಈ ರೀತಿಯ ಸಮಗ್ರ ಕ್ರಾಂತಿಗೆ ಇತಿಹಾಸದಲ್ಲಿ ಯಾವುದೇ ಉದಾಹರಣೆ ಇಲ್ಲ. ಪ್ರಾಯಶಃ ಸ್ವಾಮಿ ವಿವೇಕಾನಂದರ ಈ ಮಾತು ನಮಗೆ ಸಮಾಧಾನ ತರಬಹುದು: "ಎಲ್ಲ ರಾಸಾಯನಿಕ ವಸ್ತುಗಳನ್ನು ಒಟ್ಟು ಸೇರಿಸಿ ಮಿಶ್ರಮಾಡಿ; ಹರಳುಗಟ್ಟುವಿಕೆಯು ಪ್ರಕೃತಿಯ ನಿಯಮಗಳ ಪ್ರಕಾರ ಮುಂದೆ ನಡೆಯುತ್ತದೆ."

ಕರಗಿಸುವ ಕುಂಭ: ಭಾರತದ ಇಂದಿನ ಪರಿಸ್ಥಿತಿ

ಶಿಕ್ಷಣ, ರಾಜಕೀಯ, ಧರ್ಮ, ಸಮಾಜ, ಸಂಸ್ಕೃತಿ, ಇತ್ಯಾದಿಗಳು ಸೇರಿದಂತೆ, ಇಂದು ಭಾರತದಲ್ಲಿ ಪ್ರತಿಯೊಂದೂ ಕರಗಿಸುವ ಕುಂಭದೊಳಗಿವೆ. ಸುದೀರ್ಘ ಇತಿಹಾಸವನ್ನು ಪಡೆದಿರುವ ಭಾರತವು ಇಂದು ಕ್ರಾಂತಿಕಾರೀ ಬದಲಾವಣೆಯನ್ನು ಪಡೆಯುವ ಹಂತದ ಮೂಲಕ ಹಾದುಹೋಗುತ್ತಿದೆ. ಮುಂದೆ ಯಾವ ರೂಪವನ್ನು ಇದು ಪಡೆಯಬಹುದು ಎಂಬ ಭವಿಷ್ಯವಾಣಿ ನುಡಿಯುವವರು ಯಾರೂ ಇಲ್ಲ. ಪ್ರಾಯಶಃ ಸ್ವಾಮಿ ವಿವೇಕಾನಂದರು ಹೇಳಿದಂತೆ ನಾವು ಎಲ್ಲ ರಾಸಾಯನಿಕ ವಸ್ತುಗಳನ್ನು ಒಟ್ಟು ಸೇರಿಸಿ ಮಿಶ್ರಮಾಡಬೇಕು; ಹರಳುಗಟ್ಟಿ ನಿರ್ದಿಷ್ಟರೂಪವು ಪ್ರಕೃತಿಯ ನಿಯಮಗಳ ಪ್ರಕಾರ ಮುಂದೆ ಕಾಣಿಸಿಕೊಳ್ಳುತ್ತದೆ.

ಪರಿಹಾರಗಳು:

"ನಾಸ್ತಿ ಜಾಗರತೋ ಭಯಂ" (ಜಾಗರೂಕನಾಗಿದ್ದವನಿಗೆ ಭಯವಿಲ್ಲ) ಎಂದು ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ. ಹೀಗಾಗಿ ಭಾರತೀಯರಿಂದು ಅವಶ್ಯವಾಗಿ ಇವುಗಳನ್ನು ಮಾಡಬೇಕು:

೧. ಸದಾ ಎಚ್ಚರದಿಂದಿರುವುದು

೨. ಸಂದೇಹಾಸ್ಪದವಾದುದು ಕಂಡುಬಂದಾಗ ಪೋಲೀಸರಿಗೆ ಮಾಹಿತಿ ಕೊಡುವುದು.

೩. ತಪ್ಪಿತಸ್ಥರನ್ನು ಶಿಕ್ಷಿಸುವುದು

ಭಾವದಲ್ಲಿ ಮೊದಲು: ಭವದಲ್ಲಿ ಬಳಿಕ

ಪ್ರತಿಯೊಬ್ಬ ವ್ಯಕ್ತಿಯೂ ಸಮಾಜವನ್ನು ಪರಿವರ್ತಿಸಬಲ್ಲ ಪ್ರಭಾವ ವಲಯದ ಒಂದು ಶಕ್ತಿಕೇಂದ್ರವಾದಾಗ, ತರಂಗಪರಿಣಾಮದ ಮೂಲಕ ವಿಶ್ವವನ್ನೇ ಪರಿವರ್ತಿಸುವುದು ಸಾಧ್ಯ. ಹಾಗಾಗಿ ಪರಿಹಾರದ ಪ್ರಕ್ರಿಯೆಯು ನಮ್ಮಲ್ಲಿ ಪ್ರತಿಯೊಬ್ಬರ ಆಂತರ್ಯದಿಂದ ಪ್ರಾರಂಭವಾಗಬೇಕು. ಈ ಜಗತ್ತಿನಲ್ಲಿ ಪ್ರತಿಯೊಂದೂ ಎರಡು ಬಾರಿ ಸೃಷ್ಟಿಸಲ್ಪಡುತ್ತದೆ: ಮೊದಲು ಮಾನಸಿಕ ಲೋಕದಲ್ಲಿ, ಬಳಿಕ ಭೌತಿಕ ಲೋಕದಲ್ಲಿ; ಭಾವಲೋಕದಲ್ಲಿ ಬಾರದ್ದು ಭವಲೋಕದಲ್ಲಿ ಬರುವುದಿಲ್ಲ. ಭಾವಲೋಕದಲ್ಲಿ ವಿಷಯವೊಂದು ಸ್ಪಷ್ಟವಾಗಿ ಮೂಡಲು ಚಿಂತನ ಮಂಥನಗಳು ನಡೆಯಬೇಕು. ವಿವೇಕಿಯಾಗಲು ಒಬ್ಬ ತನ್ನ ವೈಯಕ್ತಿಕ ನಂಬಿಕೆ, ಪೂರ್ವಾಗ್ರಹಗಳನ್ನು ಬದಿಗಿರಿಸಿ, ವಿಭಿನ್ನ ಕ್ಷೇತ್ರಗಳಿಂದ ಹೊಸಹೊಸ ಜ್ಞಾನಗಳನ್ನು ಪಡೆದು, ವಿಷಯಗಳ ಆಳಕ್ಕೆ ಇಳಿದು, ಅಂತರೀಕ್ಷಣೆ ಮಾಡಿ, ಪರಿಣಾಮಗಳಿಂದ ಕಾರಣಗಳತ್ತ ನಡೆದು, ಮುಕ್ತಮನಸ್ಸಿನಿಂದ ಯೋಚನೆಗಳನ್ನು ಹರಿಯಬಿಡುವುದು ಅಗತ್ಯ.

ಯೋಗ

ಮಾನಸಿಕ ನಿಲುವಿನ ಬದಲಾವಣೆಗೆ ಧ್ಯಾನ ಮತ್ತು ಯೋಗವು ಉತ್ತಮ ಸಾಧನವೆಂಬುದನ್ನು ಒತ್ತಿಹೇಳುತ್ತಾ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ವಿಶ್ವದ ಎಲ್ಲೆಡೆ 'ಒಳ್ಳೆಯವನಾಗು', 'ಒಳ್ಳೆಯವನಾಗು' ಮತ್ತು 'ಒಳ್ಳೆಯವನಾಗು' ಎಂದು ಕಲಿಸುವುದನ್ನು ನಾವು ಕೇಳಿದ್ದೇವೆ. 'ಕಳ್ಳತನ ಮಾಡಬೇಡ', 'ಸುಳ್ಳು ಹೇಳಬೇಡ' ಎಂಬ ಬುದ್ಧಿವಾದ ಕೊಡಲ್ಪಡದ ಮಗುವೊಂದು ಯಾವ ದೇಶದಲ್ಲೂ ಇಲ್ಲ. ಆದರೆ ಹಾಗೆ ಮಾಡದಿರುವುದನ್ನು ಹೇಗೆ ಸಾಧಿಸುವುದೆಂದು ಯಾವೊಬ್ಬನೂ ಮಕ್ಕಳಿಗೆ ಕಲಿಸುವುದಿಲ್ಲ. ಯಾಕೆ ಕಳ್ಳನಾಗಬಾರದೆಂಬುದನ್ನು ಅವನಿಗೆ ಹೇಳುವುದರಿಂದ ಪ್ರಯೋಜನವಿಲ್ಲ. ಕದಿಯದೇ ಇರುವುದು ಹೇಗೆ ಎಂಬುದನ್ನು ನಾವು ಅವನಿಗೆ ಕಲಿಸುವುದಿಲ್ಲ. 'ಕಳ್ಳತನ ಮಾಡಬೇಡ' ಎಂದಷ್ಟೇ ನಾವು ಅವನಿಗೆ ಹೇಳುತ್ತೇವೆ. ಮನಸ್ಸನ್ನು ಹೇಗೆ ನಿಯಂತ್ರಿಸುವುದೆಂದು ಅವನಿಗೆ ಕಲಿಸಿದಾಗ ಮಾತ್ರ ನಾವು ಅವನಿಗೆ ನಿಜವಾಗಿ ಸಹಾಯ ಮಾಡಿದಂತಾಗುತ್ತದೆ." ಬಹಿರಂಗದ ಪರಿಸ್ಥಿತಿ ಮತ್ತು ಅಂತರಂಗದ ಮನಃಸ್ಥಿತಿಗಳ ನಡುವೆ ನಿಗೂಢವಾದ ಸಂಬಂಧವಿದೆ ಎನ್ನುತ್ತಾರೆ ಮಹಾನ್ ಚಿಂತಕರು. ಮನಸ್ಸಿನಲ್ಲಿ ಮೂಡುವ ಭಾವನೆಗಳನ್ನು ನಿಯಂತ್ರಿಸದಿದ್ದರೆ, ಬಾಹ್ಯ ಪರಿಸ್ಥಿತಿಯನ್ನು ನಿಯಂತ್ರಿಸಲು ಅಸಾಧ್ಯ. ಭಾವನೆಗಳನ್ನು ನಿಯಂತ್ರಿಸಿ

ತನ್ಮೂಲಕ ಜೀವನದೃಷ್ಟಿಯನ್ನು ಸರಿಪಡಿಸಿಕೊಳ್ಳುವುದು ಸಾಧ್ಯ.

ಪಾದ್ರಿಯ ಸಮಾಧಿ: ನನ್ನಿಂದ ವಿಶ್ವಪರಿವರ್ತನೆ

ಲಂಡನ್ ನಗರದ ವೆಸ್ಟ್ ಮಿನಿಸ್ಟರ್ ಎಬೆ ಎಂಬ ಚರ್ಚಿನ ನಿವೇಶನದಲ್ಲಿ ಅನೇಕ ಗಣ್ಯರ ಸಮಾಧಿಗಳ ನಡುವಿರುವ ಪಾದ್ರಿಯೊಬ್ಬರ ಸಮಾಧಿಯ ಮೇಲೆ ಹೀಗೆ ಬರೆಯಲಾಗಿದೆ: "ನಾನು ಬಾಲಕನಾಗಿದ್ದಾಗ ಇಡೀ ವಿಶ್ವವನ್ನೇ ಬದಲಾಯಿಸಿಬೇಕೆಂದಿದ್ದೆ, ಆದರದು ಸಾಧ್ಯವಾಗಲಿಲ್ಲ; ಯುವಕನಾಗಿದ್ದಾಗ ಇಡೀ ದೇಶವನ್ನೇ ಬದಲಾಯಿಸಬೇಕೆಂದಿದ್ದೆ, ಅದು ಸಾಧ್ಯವಾಗಲಿಲ್ಲ; ಮಧ್ಯವಯಸ್ಕನಾದಾಗ ಇಡೀ ನಗರವನ್ನೇ ಬದಲಾಯಿಸಬೇಕೆಂದಿದ್ದೆ, ಅದೂ ಸಾಧ್ಯವಾಗಲಿಲ್ಲ; ಮುದುಕನಾದ ಬಳಿಕ ನನ್ನ ಮನೆಯವರನ್ನಾದರೂ ಬದಲಾಯಿಸಬೇಕೆಂದಿದ್ದೆ, ಆದರೆ ಅವರು ಯಾರೂ ನನ್ನ ಮಾತನ್ನು ಕೇಳಲಿಲ್ಲ. ಈಗ ನಾನು ನನ್ನ ಮರಣಶಯ್ಯೆಯಲ್ಲಿದ್ದೇನೆ. ನಾನು ತದ್ವಿರುದ್ಧವಾದ ದಿಕ್ಕಿನಲ್ಲಿ ಪ್ರಯತ್ನಿಸಬೇಕಿತ್ತೆಂದು ನನಗೀಗ ಮನವರಿಕೆಯಾಗಿದೆ. ನಾನು ಮೊತ್ತಮೊದಲು ನನ್ನನ್ನು ಪರಿವರ್ತಿಸಿಕೊಳ್ಳಬೇಕಿತ್ತು; ಆಗ ನನ್ನ ಮನೆಯವರೆಲ್ಲಾ ಬದಲಾಗುತ್ತಿದ್ದರು; ಅದರಿಂದಾಗಿ ಇಡಿ ನಗರವೇ ಬದಲಾಗುತ್ತಿತ್ತು; ಇದರಿಂದಾಗಿ ಇಡೀ ದೇಶವೇ ಬದಲಾಗುತ್ತಿತ್ತು; ಮತ್ತು ಬದಲಾದ ದೇಶವನ್ನು ನೋಡಿ ಇಡೀ ವಿಶ್ವವೇ ಬದಲಾಗುತ್ತಿತ್ತು."

ನನ್ನಿಂದ ಪರಿವರ್ತನೆ: ಗಾಂಧೀಜಿ ಮತ್ತು ವಿನೋಬಾ

ಗಾಂಧೀಜಿ ವಿದೇಶಿ ಮಿತ್ರರೊಬ್ಬರಿಗೆ ಹೀಗೆ ಬರೆದಿದ್ದರು: "ನಾನು ಆತ್ಮಶಕ್ತಿಗೆ ಜನಪ್ರಿಯತೆ ತರಬೇಕೆಂದಿದ್ದೇನೆ; ಈ ಆತ್ಮಶಕ್ತಿಯೆಂದರೆ ಪ್ರೀತಿಶಕ್ತಿ. ನನ್ನ ಜೀವನದ ಮೂಲಕ ಅದರ ನಿಜವಾದ ಶಕ್ತಿಯನ್ನು ತೋರಿಸಲು ಇಚ್ಛಿಸುತ್ತೇನೆ. ಆಗ ಭಾರತೀಯರೆಲ್ಲರೂ ನನ್ನನ್ನು ಅನುಸರಿಸುತ್ತಾರೆ ಮತ್ತು ಆಗ ಯಾವ ಬಾಹ್ಯಶಕ್ತಿಯೂ ನಮ್ಮನ್ನು ತಡೆಯಲಾರದು."

ವಿನೋಬಾ: ಆತ್ಮರಾಜ್ಯ, ಗ್ರಾಮಸ್ವರಾಜ್ಯ, ದೇಶಸ್ವರಾಜ್ಯ ಮತ್ತು ವಿಶ್ವರಾಜ್ಯಗಳು ಒಂದೇ ಚಿಂತನೆಯ ವಿಭಿನ್ನ ಪರಿಕಲ್ಪನೆಗಳು ಎನ್ನುತ್ತಿದ್ದರು ವಿನೋಬಾ ಭಾವೆ.

ಭಯವಲ್ಲ – ಅಭಯ:

ಹಲವು ಶತಮಾನಗಳ ಹಿಂದೆ ಪರ್ಶಿಯಾದೇಶದಲ್ಲಿ ಪಾರ್ಸೀ ಜನಾಂಗದವರು ಮತಾಂಧರ ಹಿಂಸೆಗೆ ಒಳಗಾದಾಗ, ಹಲವು ಮಂದಿ ಗಂಡಸರು, ಹೆಂಗಸರು ಮತ್ತು ಮಕ್ಕಳು ಹೇಗೋ ತಪ್ಪಿಸಿಕೊಂಡು ಹಡಗಿನ ಮೂಲಕ ಮುಂಬಯಿಗೆ ಬಂದರು. ಅವರ ಮುಖ್ಯ ಧರ್ಮಗುರುಗಳು ಇತರ ನಿರಾಶ್ರಿತರೊಡನೆ ಮುಂಬಯಿಯ ಮಹಾರಾಜರನ್ನು ಭೇಟಿಯಾಗಿ ಆಶ್ರಯವನ್ನು ಯಾಚಿಸಿದರು. ದಯಾಪರರಾದ ಮಹಾರಾಜರು ಹೇಳಿದರು: "ನಿಮಗೆಲ್ಲರಿಗೂ ಆಶ್ರಯಕೊಡಲು ನಮಗೆ ಸಂತೋಷವಾಗುತ್ತದೆ; ದಯವಿಟ್ಟು ನಿಮ್ಮ ಅವಶ್ಯಕತೆಗಳನ್ನು ನಮಗೆ ತಿಳಿಸಿರಿ."

ಧರ್ಮಗುರು: ನಮ್ಮ ಪಾರ್ಸೀ ಧರ್ಮವನ್ನು ಆಚರಿಸುತ್ತಾ ನಿಮ್ಮ ರಾಜ್ಯದಲ್ಲಿ ನಿಮ್ಮ

ಪ್ರಜೆಗಳಾಗಿ ಬದುಕಲು ದಯವಿಟ್ಟು ನಮಗೆ ಸದವಕಾಶ ದಯಪಾಲಿಸಿರಿ.
ರಾಜ: ಹಾಗೆಯೇ ಆಗಲಿ. ಮುಂದೆ ಇನ್ನೇನು ಬೇಡಿಕೆಯಿದೆ?
ಧರ್ಮಗುರು: ನಿಮ್ಮ ರಾಜ್ಯಕ್ಕೆ ಹೊರೆಯಾಗಿ ಬದುಕಲು ನಮಗೆ ಇಷ್ಟವಿಲ್ಲ. ನಾವು ಕಷ್ಟಪಟ್ಟು ದುಡಿದು ಉಣ್ಣಬಯಸುತ್ತೇವೆ. ತಾವು ನಮಗೆ ಕೃಷಿಗಾಗಿ ಒಂದಿಷ್ಟು ಭೂಮಿಯನ್ನು ದಯಪಾಲಿಸಿರಿ.
ರಾಜ: ಇದಕ್ಕೂ ಒಪ್ಪಿದ್ದೇನೆ. ಇದರ ವ್ಯವಸ್ಥೆ ಮಾಡಲಾಗುವುದು.
ಆಗ ಧರ್ಮಗುರುಗಳು ಒಂದು ಲೋಟ ಹಾಲಿಗೆ ಒಂದು ಚಮಚ ಸಕ್ಕರೆ ಹಾಕಿ, ಕರಗಿಸಿ ಮಹಾರಾಜರಿಗೆ ಹೇಳಿದರು: "ಮಹಾಪ್ರಭುಗಳೇ, ಈಗ ಸಕ್ಕರೆಯು ಹಾಲಿನಲ್ಲಿ ಕರಗಿಹೋಗಿ ಕಾಣದಾಗಿದ್ದರೂ ಹಾಲನ್ನು ಸಿಹಿ ಮಾಡಿದೆ. ನಾವು ಪಾರ್ಸಿಗಳು ಹೀಗೆಯೇ ನಿಮ್ಮ ರಾಜ್ಯದಲ್ಲಿ ಸಾಮರಸ್ಯದಿಂದ ಬದುಕಿ ಇಲ್ಲಿಯ ಜನಜೀವನವನ್ನು ಸಿಹಿಯಾಗಿಸುತ್ತೇವೆ." ಪಾರ್ಸೀ ಮೂಲದವರಿಂದು ಭಾರತದಲ್ಲಿ ಸಾಮರಸ್ಯದಿಂದ ಬೆರೆತುಹೋಗಿದ್ದಾರೆ.

ಭಯೋತ್ಪಾದಕ ಶಾಂತಿದೂತನಾದ:

ಆತ್ಮಾವಲೋಕನ ಮತ್ತು ಅದರಿಂದಾದ ಸಕಾರಾತ್ಮಕ ಮಾನಸಿಕ ನಿಲುವಿನ ಪರಿವರ್ತನೆಗೆ ಈಜಿಪ್ಟಿನ ಭೂತಪೂರ್ವ ಅಧ್ಯಕ್ಷ ಅನ್ವರ್ ಸದಾತ್ ಉತ್ತಮ ಉದಾಹರಣೆ.

ಇಸ್ರೇಲಿನ ಪ್ರಜೆಗಳೊಡನೆ ತಾನೆಂದೂ ಹಸ್ತಲಾಘವ ಮಾಡುವುದಿಲ್ಲವೆಂದೂ, ಒಂದುವೇಳೆ ತಾನು ಈಜಿಪ್ಟಿನ ಅಧ್ಯಕ್ಷನಾದರೆ, ಘನಘೋರ ಯುದ್ಧದ ಮೂಲಕ ಇಸ್ರೇಲನ್ನು ಜಾಗತಿಕ ಭೂಪಟದಿಂದಲೇ ಅಳಿಸುವುದಾಗಿಯೂ ಭಾವಾವೇಶದಿಂದ ಹೇಳುತ್ತಿದ್ದ. ಆಗಿನ ಅಧ್ಯಕ್ಷ ಫರೂಕ್ ಅವರ ಕೊಲೆಯಲ್ಲಿ ಭಾಗಿಯಾಗಿದ್ದನೆಂದು ಅವನಿಗೆ ಜೈಲುಶಿಕ್ಷೆಯಾಯಿತು. ಹಲವು ವರ್ಷ ಅವನು ಕತ್ತಲ ಕೋಣೆಯಲ್ಲಿ ಕಳೆದ. ಆ ಅವಧಿಯಲ್ಲಿ ಅವನು ಮೌನವಾಗಿ ಅಂತರೀಕ್ಷಣೆ ಮತ್ತು ಧ್ಯಾನಗಳಲ್ಲಿ ತೊಡಗಿಸಿಕೊಂಡು ತನ್ನ ಮಾನಸಿಕ ನಿಲುವನ್ನೇ ಬದಲಾಯಿಸಿಕೊಂಡು, ಜೀವನದ ನಿಜವಾದ ಗೆಲುವು ಏನೆಂಬುದನ್ನು ಅರಿತ. ಫರೂಕ್ ಅವರ ಬಳಿಕ ಕರ್ನಲ್ ನಸ್ಸೇರ್ ಅಧಿಕಾರಕ್ಕೆ ಬಂದಾಗ ಅನ್ವರ್ ಸದಾತನ ಬಿಡುಗಡೆಯಾಯಿತು. ಅವನೀಗ ಸಂಪೂರ್ಣ ಬದಲಾಗಿದ್ದ. ಕಾಡ್ಗಿಚ್ಚಿನಂತೆ ಜೈಲಿಗೆ ಹೋದವನು ನಂದಾದೀಪವಾಗಿ ಜೈಲಿನಿಂದ ಹೊರಬಂದಿದ್ದ.

ತನ್ನ ಆತ್ಮಚರಿತ್ರೆಯಲ್ಲಿ ಅವನು ಹೀಗೆ ಬರೆಯುತ್ತಾನೆ: "ನಾನು ಜೈಲಿನಿಂದ ಹೊರಬರುತ್ತಿದ್ದಾಗ ಅಲ್ಲಿಯ ಕತ್ತಲ ಕೋಣೆಯು ನನ್ನನ್ನು ಶುಭಾಶಯದೊಡನೆ ಬೀಳ್ಕೊಟ್ಟಿತು. ಭಾವಾವೇಶದಿಂದ ನಾನು ಅತ್ತುಬಿಟ್ಟೆ. ನಾನು ವಿದ್ಯಾಶಾಲೆಯಿಂದ ಅಥವಾ ದೇವಮಂದಿರದಿಂದ ಹೊರಹೋಗುತ್ತಿರುವೆನೆಂಬ ಭಾವವನ್ನು ಅನುಭವಿಸಿದೆ."

ಇಸ್ರೇಲಿನ ಪ್ರಜೆಗಳೊಡನೆ ತಾನೆಂದೂ ಹಸ್ತಲಾಘವ ಮಾಡುವುದಿಲ್ಲವೆಂದು ಹಿಂದೆ ಹೇಳಿದ್ದ ಅವನು, ಮುಂದೆ ಈಜಿಪ್ಟಿನ ಪ್ರಧಾನಮಂತ್ರಿಯಾದಾಗ, ಮುಸ್ಲಿಮರನ್ನು ಉಗ್ರಗಾಮಿಗಳನ್ನಾಗಿ ಮಾಡುವುದು ಅಲ್ಲಾನ ಚಿತ್ತಕ್ಕೆ ವ್ಯತಿರಿಕ್ತವಾದುದೆಂದು ಹೇಳಿ, ಸಂಧಾನಕ್ಕಾಗಿ ಅವನು ಇಸ್ರೇಲಿನವರನ್ನು ಆಹ್ವಾನಿಸಿ ಅವರೊಡನೆ ಪ್ರೀತಿಪೂರ್ವಕವಾಗಿ

ಹಸ್ತಲಾಘವ ಮಾಡಿದ.

ಕ್ಯಾಂಪ್ ಡೇವಿಡ್‌ನಲ್ಲಿ ಅವನು ಚಾರಿತ್ರಿಕ ಮಹತ್ವದ ಶಾಂತಿ ಒಪ್ಪಂದಕ್ಕೆ ಸಹಿಹಾಕಿ ರಕ್ತಸ್ನಾನದಿಂದ ಈಜಿಪ್ಟನ್ನು ರಕ್ಷಿಸಿದ. ಅನ್ವರ್ ಸದಾತ್ ಮತ್ತು ಇಸ್ರೇಲಿನ ಪ್ರಧಾನಮಂತ್ರಿ ಮೆನಾಚೆನ್ ಬೆಗಿನ್ ಅವರಿಬ್ಬರಿಗೆ, ಶಾಂತಿ ಒಪ್ಪಂದದ ಮೂಲಕ ಎರಡು ದೇಶಗಳನ್ನು ಯುದ್ಧದಿಂದ ಶಾಂತಿಯತ್ತ ಸಾಗಿಸಿದ್ದಕ್ಕಾಗಿ, ೧೯೭೮ರ ನೋಬೆಲ್ ಶಾಂತಿ ಪಾರಿತೋಷಕವು ಕೊಡಲ್ಪಟ್ಟಿತು. ಕ್ಯಾಂಪ್ ಡೇವಿಡ್ ಒಪ್ಪಂದವು ಈಜಿಪ್ಟ್ ದೇಶಕ್ಕೆ ಶಾಂತಿಯನ್ನು ತಂದರೂ ಸಂಪತ್ತನ್ನು ತರಲಿಲ್ಲ. ಕ್ರಮೇಣ ಅನ್ವರ್ ಸಾದತ್ ಅವರ ಜನಪ್ರಿಯತೆ ಇಳಿಮುಖವಾಯಿತು. ೧೯೮೧ರ ಅಕ್ಟೋಬರ್ ೬ರಂದು ಮೂಲಭೂತವಾದೀ ಆತ್ಮಾಹುತಿ ದಳದವರ ಗುಂಡೇಟಿಗೆ ಸಾದಾತ್ ಬಲಿಯಾದರು.

ಅಂತರ ಸಂಸ್ಕೃತಿ ಇಲಾಖೆ: ಯುನೆಸ್ಕೋ

ಇಂದಿನ ಮುಗ್ಧ ಮಕ್ಕಳಲ್ಲಿ ಧಾರ್ಮಿಕ ಸಾಮರಸ್ಯವನ್ನು ಬಿತ್ತುವ ಶಿಕ್ಷಣಕ್ರಮವನ್ನು ಆಚರಣೆಗೆ ತರುವುದು ತುಂಬಾ ಅಗತ್ಯ.

ಯುನೆಸ್ಕೋದ ಅಂತರ-ಸಂಸ್ಕೃತಿ ಇಲಾಖೆಯು ವಿವಿಧ ಧರ್ಮಗಳ ಆಧ್ಯಾತ್ಮಿಕ ಐಕ್ಯತೆ ಮತ್ತು ವಿವಿಧ ಧರ್ಮಗಳ ನಡುವೆ ವಿಚಾರವಿನಿಮಯದ ಅವಶ್ಯಕತೆಯನ್ನು ಸಾರಿಹೇಳುತ್ತಿದೆ.

ಮಕ್ಕಳಲ್ಲಿ "ಪರ"ರ ವಿಷಯದಲ್ಲಿ ಸಹಿಷ್ಣುತೆ, ಗೌರವ, ನಂಬಿಕೆಗಳ ಮೌಲ್ಯಗಳು ಇದ್ದಾಗ "ಪರ"ರ ಕುರಿತು ಅವರ ವರ್ತನೆ, ಮಾನಸಿಕ ನಿಲುವುಗಳು ಇತ್ಯಾತ್ಮಕವಾಗಿ ಬದಲಾಗುವುದರಿಂದ, ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ "ಪರ"ರ ಕುರಿತು ಅರಿವು ಮೂಡಿಸಬೇಕೆಂದು ಯುನೆಸ್ಕೋದ ಈ ಇಲಾಖೆ ಹೇಳುತ್ತಾಬರುತ್ತಿದೆ.

ಸೆಕ್ಯುಲರ್ ದೇಶ ಭಾರತ

'ಪರ'ಧರ್ಮದ ಕುರಿತಾದ ಜ್ಞಾನ ಮಕ್ಕಳಿಗೆ ಅತ್ಯಾವಶ್ಯಕ ಎಂದಿರುವುದು ಇದಕ್ಕಾಗಿಯೇ.

ಶಾಲಾಕಾಲೇಜುಗಳಲ್ಲಿ, ಈಗ ಪರಿಸರ ಮತ್ತು ಸಂವಿಧಾನದ ಕಲಿಕೆಯಂತೆ, ಎಲ್ಲ ಧರ್ಮಗಳ ಉತ್ತಮೋತ್ತಮ ಅಂಶಗಳ, ಎಲ್ಲ ಧರ್ಮಗಳ ಸಮಾನತೆಯ ಆಧಾರದ ಧರ್ಮನಿರಪೇಕ್ಷ (ಸೆಕ್ಯುಲರ್) ದೇಶ ಭಾರತ. ಸೆಕ್ಯುಲರ್ ಭಾವನೆಗಳು ಉನ್ನತ ಮಟ್ಟದವು ಮತ್ತು ಅವು ದೇಶದ ಒಗ್ಗಟ್ಟಿಗೆ ಅವಶ್ಯಕ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಎಲ್ಲ ಧರ್ಮಗಳ ಕುರಿತಾದ ಜ್ಞಾನದ ಮಣ್ಣಿನಲ್ಲಿ ಮಾತ್ರ ಸೆಕ್ಯುಲರ್ ಭಾವನೆಗಳು ಮೂಡಲು ಸಾಧ್ಯ. ತನ್ನ ಧರ್ಮ ಮತ್ತು ಅದರೊಡನೆ ಇತರ ಧರ್ಮಗಳ ಕುರಿತು ಯುವಜನರಲ್ಲಿ ಜ್ಞಾನದ ಬದಲು, ಅಜ್ಞಾನವೇ ತುಂಬಿದ್ದರೆ, ಸೆಕ್ಯುಲರ್ ಭಾವನೆಗಳನ್ನು ಮೂಡಿಸುವುದು ಮಣ್ಣೇ ಇಲ್ಲದೆ ಮರಗಿಡ ಬೆಳೆಸಲು ಯತ್ನಿಸಿದಂತೆ. ಯುನೆಸ್ಕೋದ ತಜ್ಞರ ಅಭಿಪ್ರಾಯದಂತೆ ಜ್ಞಾನವನ್ನು ನೀಡುವುದು ಸೆಕ್ಯೂಲರ್ ಭಾವನೆಗಳ ಉದಯ ಮತ್ತು ಸರ್ವಧರ್ಮಸಮನ್ವಯಕ್ಕೆ ಅವಶ್ಯಕ. ೧೯೯೧ರಿಂದ ಆರ್ಥಿಕ ಉದಾರೀಕರಣ ಬಂದು ಭಾರತಕ್ಕೆ ಒಳಿತಾಗಿದೆ. ಹಾಗೆಯೇ

ಎಲ್ಲ ಧರ್ಮಗಳ ಅರಿವಿನ ಉದಾರೀಕರಣದಿಂದ ಸಾಮರಸ್ಯ ಉಂಟಾಗಿ ದೇಶಕ್ಕೆ ಒಳಿತಾಗುತ್ತದೆ.

ಇಂಡೋನೇಶಿಯಾದ 'ಪಂಚಶೀಲ': ಪರರ ಅರಿವು

೯೦% ಮುಸ್ಲಿಮರಿರುವ ಇಂಡೋನೇಶಿಯಾದ ಮಕ್ಕಳಲ್ಲಿ ಧಾರ್ಮಿಕ ಸಾಮರಸ್ಯದ ಅರಿವನ್ನು ಮೂಡಿಸಲು ಶಾಲಾವಿದ್ಯಾಭ್ಯಾಸದಲ್ಲಿ "ಪಂಚಶೀಲ"ವೆಂಬ ವಿಶಿಷ್ಟ ಪದ್ಧತಿಯು ಬಳಕೆಯಲ್ಲಿದೆ. ಶಾಲೆಯಲ್ಲಿ ಪ್ರತಿಯೊಂದು ಮಗುವೂ ತನ್ನ ಧರ್ಮವನ್ನು ಅರಿಯುವುದರ ಜತೆಗೆ ಇತರ "ಐದು" ಪ್ರಮುಖ ಧರ್ಮಗಳ ಮುಖ್ಯಾಂಶಗಳನ್ನು ಅರಿಯುವುದೇ "ಪಂಚಶೀಲ" ಪದ್ಧತಿ. ಆ ಮೂಲಕ ವಿವಿಧ ಧರ್ಮಗಳು ಒಬ್ಬನೇ ದೇವನತ್ತ ಕೊಂಡೊಯ್ಯುವ ಬೇರೆ ಬೇರೆ ದಾರಿಗಳು ಎಂಬ ಸತ್ಯವನ್ನು ಮಕ್ಕಳು ಮನಗಾಣುತ್ತವೆ. ಇಂಡೋನೇಶಿಯಾದ ಧಾರ್ಮಿಕ ಸಾಮರಸ್ಯಕ್ಕೆ ಇನ್ನೊಂದು ಉದಾಹರಣೆ ಹಿಂದೂಗಳಿಂದ ಅಗ್ರಪೂಜೆ ಪಡೆಯುವ ಗಣೇಶ. ಅಲ್ಲಿಯ ೨೦,೦೦೦ ಮೌಲ್ಯದ ನೋಟಿನ ಮೇಲೆ ಗಣೇಶನ ಸುಂದರ ಚಿತ್ರ ಮುದ್ರಿಸಲ್ಪಟ್ಟಿದೆ. ಬ್ಯಾಂಕ್ ಆಫ್ ಇಂಡೋನೇಶಿಯಾವು ೧೯೮೮ರಲ್ಲಿ ಹೊರತಂದ ಈ ನೋಟಿನ ಮೇಲೆ ವಿಘ್ನೇಶ್ವರನ ಜತೆ ಗರುಡಪಕ್ಷಿಯ ಚಿತ್ರವೂ ಇದೆ.

ಭಾರತದಲ್ಲಿ ಇಂಡೋನೇಶಿಯಾದ "ಪಂಚಶೀಲ"ವನ್ನು ಒಂದು ಮಾದರಿಯಾಗಿ ತೆಗೆದುಕೊಂಡು, ಶಾಲೆಗಳಲ್ಲಿ ಬೈಬಲ್, ಭಗವದ್ಗೀತೆ, ಕುರಾನ್, ಗ್ರಂಥಸಾಹೇಬ್ ಮೊದಲಾದ ಧಾರ್ಮಿಕ ಗ್ರಂಥಗಳ ಸಾರಾಂಶ ಮತ್ತು ಉತ್ತಮಾಂಶಗಳನ್ನು ಮಕ್ಕಳಿಗೆ ಕಲಿಸಿದರೆ, ಯುನೆಸ್ಕೋವು ಬಯಸುವ "ಪರ"ರ ಅರಿವು ಮಕ್ಕಳಿಗೆ ಬಂದು, ಧಾರ್ಮಿಕ ಸಾಮರಸ್ಯವು ಭಾರತದಲ್ಲಿ ಬಲವಾಗಿ ಬೇರೂರಬಹುದು.

ಸೂರತ್ ಆಧ್ಯಾತ್ಮಿಕ ಘೋಷಣೆ: ಪರಸ್ಪರ ಧಾರ್ಮಿಕ ಅರಿವು

ಭಾರತದ ಅಂದಿನ ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂ ಅವರ ಸಮಕ್ಷಮದಲ್ಲಿ ಸೂರತ್‌ನಲ್ಲಿ ೧೫ನೇ ಅಕ್ಟೋಬರ್ ೨೦೦೩ರಂದು ವಿವಿಧ ಧರ್ಮಗಳ ೧೫ ಮುಖಂಡರು ಸಭೆ ಸೇರಿ ಭಾರತದಲ್ಲಿ ಮತ್ತು ಮುಂದೆ ವಿಶ್ವದಲ್ಲಿ "ಜ್ಞಾನೋದಯವಾದ ನಾಗರಿಕ"ರನ್ನು ಸೃಷ್ಟಿಸಲು "ಸೂರತ್ ಆಧ್ಯಾತ್ಮಿಕ ಘೋಷಣೆ"ಯನ್ನು ಮಾಡಿದರು.

ಇದರ ಆಯಾಮಗಳು ಹೀಗಿವೆ:

೧. ಅಂತರ್ಧರ್ಮೀಯ ಹಬ್ಬಗಳ ಆಚರಣೆ,

೨. ಬಹುಧರ್ಮಗಳನ್ನು ಒಳಗೊಂಡ ಯೋಜನೆಗಳ ಅನುಷ್ಠಾನ,

೩. ಧಾರ್ಮಿಕ ಒಗ್ಗಟ್ಟನ್ನು ತರುವ ವಿದ್ಯಾಭ್ಯಾಸ,

೪. ವಿವಿಧ ಧರ್ಮಗಳ ನಡುವೆ ವಿಚಾರವಿನಿಮಯ.

ಹೊಸ ಭಾವನೆಗಳ ಯೋಚನೆ

ನಾವಿಂದು ಏನಾಗಿರುವೆವೋ ಅದು ನಾವು ಹಿಂದೆ ಮಾಡಿದ ಯೋಚನೆಗಳಿಂದ ಆಗಿದೆಯೆನ್ನುವುದು ಬುದ್ಧವಾಣಿ. ನೀವು ಮಾಡುವ ಯೋಚನೆಗಳು ನಿಮ್ಮ ಮನಸ್ಸನ್ನು

ರೂಪಿಸುತ್ತವೆ ಎಂದವನು ಮಾರ್ಕಸ್ ಅರೀಲಿಯಸ್. ಬೆಳಕಿನಿಂದ ಕತ್ತಲೆಯನ್ನು ಹೋಗಲಾಡಿಸುವಂತೆ, ಒಳಿತಿಗೆ ಒತ್ತು ಕೊಟ್ಟಾಗ ಕೆಡುಕು ಮಾಯವಾಗುತ್ತದೆ ಎಂದವನು ಮನಃಶ್ಯಾಸ್ತ್ರಜ್ಞ ಜೋಸೆಫ್ ಮರ್ಫಿ. "ಸೃಷ್ಟಿ ತತ್ವ" ಎಂಬ ಉಪನ್ಯಾಸದಲ್ಲಿ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಬ್ರಹ್ಮಾಂಡ ಮತ್ತು ಪಿಂಡಾಂಡ ಅಥವಾ ಬಾಹ್ಯ ಜಗತ್ತು ಮತ್ತು ಆಂತರಿಕ ಜಗತ್ತು ಎಂಬ ಎರಡು ಜಗತ್ತುಗಳಿವೆ. ಅನುಭವದಿಂದ ಈ ಎರಡೂ ಕ್ಷೇತ್ರಗಳಿಂದಲೂ ನಮಗೆ ಸತ್ಯ ದೊರೆಯುತ್ತದೆ. ಆಂತರಿಕ ಅನುಭವದಿಂದ ಸಂಗ್ರಹಿಸಿರುವುದೇ ಮನಃಶಾಸ್ತ್ರ, ತತ್ವಶಾಸ್ತ್ರ ಮತ್ತು ಧರ್ಮ. ಬಾಹ್ಯ ಜಗತ್ತಿನಿಂದ ನಮಗೆ ಭೌತವಿಜ್ಞಾನಗಳು ದೊರಕುವವು. ಪೂರ್ಣವಾದ ಸತ್ಯವು ಈ ಎರಡು ಕ್ಷೇತ್ರಗಳಿಂದ ಬರುವ ಅನುಭವಗಳಿಗೆ ವಿರೋಧವಿಲ್ಲದೆ ಇರಬೇಕು. ಈ ಪಿಂಡಾಂಡವು ಬ್ರಹ್ಮಾಂಡಕ್ಕೆ ಪ್ರಮಾಣವಾಗಿರಬೇಕು. ಬ್ರಹ್ಮಾಂಡವು ಪಿಂಡಾಂಡಕ್ಕೆ ಪ್ರಮಾಣವಾಗಿರಬೇಕು. ಭೌತಿಕ ಸತ್ಯಗಳಿಗೆ ಸರಿಸಮವಾಗಿರುವುದು ಆಂತರಿಕ ಪ್ರಪಂಚದಲ್ಲಿರಬೇಕು. ಆಂತರಿಕ ಜಗತ್ತಿನಲ್ಲಿರುವ ಸತ್ಯವನ್ನು ಹೋಲಿಸುವುದಕ್ಕೆ ಬಾಹ್ಯ ಜಗತ್ತಿನಲ್ಲಿ ನಮಗೆ ವಸ್ತು ದೊರಕಬೇಕು."

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅನುಭವಗಳನ್ನು ವಿವರಿಸಲು ಮತ್ತು ಅವುಗಳನ್ನು ಸಾಮರಸ್ಯದಿಂದ ಒಂದಾಗಿಸಲು ಪ್ರತಿಮೆ, ಅನುರೂಪತೆ ಮತ್ತು ರೂಪಕಗಳನ್ನು ಬಳಸುತ್ತಾನೆ ಮತ್ತು ಅವುಗಳ ಆಧಾರದದಲ್ಲಿ ಯೋಚಿಸುತ್ತಾನೆ.

೨೦ನೇ ಶತಮಾನದ ಪ್ರಸಿದ್ಧ ಕ್ವಾಂಟಮ್ ಸಿದ್ಧಾಂತವು ಬಾಹ್ಯ ಜಗತ್ತಿನ ಕುರಿತಾಗಿ ಅನೇಕ ಭೌತಿಕ ಸತ್ಯಗಳನ್ನು ಅನಾವರಣ ಮಾಡಿ ಮಾನವನ ಮುಂದಿರಿಸಿದೆ.

ಈ ಸಿದ್ಧಾಂತದ ಪ್ರಭಾವೀ ಪ್ರತಿಮೆ, ಅನುರೂಪತೆ ಮತ್ತು ರೂಪಕಗಳ ಆಧಾರದಲ್ಲಿ ಆಂತರಿಕ ಜಗತ್ತಿಗೆ ಸಂಬಂಧಿಸಿದಂತೆ ಹೊಸ ದಿಕ್ಕುಗಳಲ್ಲಿ ಯೋಚಿಸಿದಾಗ ಮೂಡುವ ಹೊಸ ಭಾವನೆಗಳು ಸಮಸ್ಯಗಳಿಂದ ತುಂಬಿದ ವಿಶ್ವಕ್ಕೆ ದಾರಿದೀಪಗಳಾಗಿ ಹೊಸ ಪರಿಹಾರವನ್ನು ತೋರಿಸಬಹುದು.

ಪೂರಕ ತತ್ವ

ಪರಮಾಣುವಿನ ಒಳಗಿರುವ ಎಲೆಕ್ಟ್ರಾನನ್ನು ಕಣ ಅಥವಾ ತರಂಗ ದೃಷ್ಟಿಯಿಂದ ನೋಡುವುದು ಸಾಧ್ಯ. ಅವೆರಡೂ ಒಂದಕ್ಕೊಂದು ಪೂರಕ. ಕಣದೃಷ್ಟಿಯು ಬೇರೆಬೇರೆಯೇ ಆದ, ಸಮೂಹಕ್ಕೆ ಸಂಬಂಧಿಸಿದ, ವ್ಯಷ್ಟಿಚಿತ್ರವನ್ನು ನೀಡುತ್ತದೆ. ತರಂಗದೃಷ್ಟಿಯು ವ್ಯಕ್ತಿಗಳನ್ನು ಮರೆಮಾಡಿದ ಸಾಮೂಹಿಕವಾದ ಸಮಷ್ಟಿಚಿತ್ರವನ್ನು ನೀಡುತ್ತದೆ. ಕ್ವಾಂಟಂ ತತ್ವವು ಕಣದೃಷ್ಟಿ ಮತ್ತು ತರಂಗದೃಷ್ಟಿಗಳೆರಡನ್ನು ಸಮನ್ವಯಗೊಳಿಸುವ ಪೂರ್ಣದೃಷ್ಟಿಯ ಚಿತ್ರವನ್ನು ನೀಡುತ್ತದೆ. ಈ ಚಿತ್ರದಲ್ಲಿ ಒಂದು ಕ್ವಾಂಟಂ ವಸ್ತುವು ಕಣದಂತೆ ವರ್ತಿಸಿ ತನ್ನ ಕಣವೈಶಿಷ್ಟ್ಯವನ್ನು ಉಳಿಸಿಕೊಂಡು ಬೇರೆಯೇ ಆಗಿರುತ್ತದೆ ಮತ್ತು ತರಂಗದಂತೆ ವರ್ತಿಸಿ ಸಮೂಹದೊಡನೆ ಸೇರಿ ಸಮನ್ವಯವನ್ನು ಸಾಧಿಸುತ್ತದೆ. ಇದರ ಅನುರೂಪತೆಯನ್ನು ಮನುಕುಲಕ್ಕೆ ಅನ್ವಯಿಸಿದಾಗ ಅನೇಕ ಸಾಧ್ಯತೆಗಳನ್ನು ನಮ್ಮ ಮುಂದಿಡುತ್ತದೆ:

ಕನ್ನಡಿಗನಾಗಿದ್ದು ಭಾರತೀಯನಾಗು; ಭಾರತೀಯನಾಗಿ ವಿಶ್ವಾದವನಾಗು;

ಏಪ್ಯಾದವನಾಗಿ ವಿಶ್ವಮಾನವನಾಗು; ನಿನ್ನ ಸಂಸ್ಕೃತಿಯನ್ನು ಉಳಿಸಿಕೊಂಡು ಇತರ ಸಂಸ್ಕೃತಿಗಳೊಡನೆ ಸಮನ್ವಯ ಸಾಧಿಸು; ನಿನ್ನ ಮಾತೃಭಾಷೆಯನ್ನು ಉಳಿಸಿಕೊಂಡು ಇಂಗ್ಲಿಷಿನಲ್ಲಿ ಪ್ರಭುತ್ವವನ್ನು ಸಂಪಾದಿಸು; ಇತ್ಯಾದಿ.

ಪೂರ್ಣವು ಭಾಗಗಳ ಕೂಡುವಿಕೆಯಿಂದ ದೊಡ್ಡದು:

ಒಂದು ಕ್ವಾಂಟಂ ವ್ಯವಸ್ಥೆಯಲ್ಲಿ ೦ಯನ್ನು ೧ಗೆ ಕೂಡಿದಾಗ ಲಭಿಸುವ ಅಯು ಸಮನ್ವಯಗೊಂಡು ಉಂಟಾಗಿರುವುದರಿಂದ ಅದು ೦+೧ ಗಿಂತ ಅಧಿಕವಾಗಿರುತ್ತದೆ; ಎಂದರೆ, ಸಮನ್ವಯದ ಕೂಡುವಿಕೆಯು ಗಣಿತದ ಕೂಡುವಿಕೆಗಿಂತ ಅಧಿಕವಾಗಿರುತ್ತದೆ. ಇಲ್ಲಿ ೦ ಮತ್ತು ೧ ಗಳು ತಮ್ಮ ವೈಶಿಷ್ಟ್ಯಗಳನ್ನು ಉಳಿಸಿಕೊಂಡು ಸಮನ್ವಯದ ಸಂಬಂಧದಿಂದಾಗಿ ಸಮಷ್ಟಿಯನ್ನು ಹೆಚ್ಚಿಸಿರುತ್ತವೆ.

ಇದರ ಅನುರೂಪತೆಯನ್ನು ಮನುಕುಲಕ್ಕೆ ಅನ್ವಯಿಸಿದಾಗ ಅನೇಕ ಸಾಧ್ಯತೆಗಳನ್ನು ನಮ್ಮ ಮುಂದಿಡುತ್ತದೆ: ವ್ಯಕ್ತಿಗಳು ತಾವು ಬೆಳೆದ ಇತರರೊಡನೆ ಸಮನ್ವಯದಿಂದಿದ್ದರೆ ತಾವಿರುವ ಸಂಸ್ಥೆಯ ಬೆಳವಣಿಗೆಗೆ ಕಾರಣರಾಗುತ್ತಾರೆ; ತಮ್ಮ ಧರ್ಮವನ್ನು ಸರಿಯಾಗಿ ಪಾಲಿಸಿ ಇತರ ಧರ್ಮೀಯರೊಡನೆ ಸಾಮರಸ್ಯದಿಂದಿದ್ದರೆ ತಮ್ಮ ದೇಶದಲ್ಲಿ ಶಾಂತಿಸುವ್ಯವಸ್ಥೆಗೆ ಕಾರಣರಾಗುತ್ತಾರೆ; ಒಂದು ರಾಜ್ಯವು ಅಭಿವೃದ್ಧಿಗೊಂಡು ಇತರ ರಾಜ್ಯಗಳೊಡನೆ ಸಾಮರಸ್ಯದಿಂದಿದ್ದರೆ ಅವುಗಳನ್ನು ಒಳಗೊಂಡ ರಾಷ್ಟ್ರ ಸರ್ವತೋಮುಖ ಅಭಿವೃದ್ಧಿಯನ್ನು ಕಾಣುತ್ತದೆ.

ಎಷ್ಟು ಮತಗಳೋ ಅಷ್ಟು ಪಥಗಳು

ಒಂದು ಕ್ವಾಂಟಂ ವ್ಯವಸ್ಥೆಯು ೦ ಯಿಂದ ೧ ಹಂತಕ್ಕೆ ದಾಟುವುದಿದ್ದರೆ ಹಲವು ದಾರಿಗಳನ್ನು ಏಕಕಾಲದಲ್ಲಿ ತಾತ್ಕಾಲಿಕವಾಗಿ ಪರೀಕ್ಷಿಸಿ ಕೊನೆಯದಾಗಿ ಒಂದು ದಾರಿಯನ್ನು ಆಯ್ಕೆಮಾಡುತ್ತದೆ.

ಅದು ಆಯ್ಕೆ ಮಾಡಿದ ಕೊನೆಯ ದಾರಿಯು ಹಿಂದೆ ತಾತ್ಕಾಲಿಕವಾಗಿ ಪರೀಕ್ಷೆಮಾಡಿದ ಎಲ್ಲ ದಾರಿಗಳ ಸಮನ್ವಯವಾಗಿರುತ್ತದೆ. ತಾತ್ಕಾಲಿಕವಾಗಿ ನಿಜವಾದ ಈ ಎಲ್ಲ ದಾರಿಗಳೂ ಭಿನ್ನವಾಗಿದ್ದರೂ ಅವೆಲ್ಲಾ ಕೊನೆಗೆ ಸಮನ್ವಯಗೊಂಡು ಒಂದೇ ದಾರಿಯ ಆಯ್ಕೆಗೆ ಕಾರಣವಾಗುತ್ತವೆ. ಎಂದರೆ ಏಕತೆಯು ಭಿನ್ನತೆಯೆಂಬ ಉತ್ಸವಗಳ ಕೊನೆಯ ಸಾಮರಸ್ಯೋತ್ಸವದ ಹಂತ. ಇದರ ಅನುರೂಪತೆಯನ್ನು ಮನುಕುಲಕ್ಕೆ ಅನ್ವಯಿಸಿದಾಗ ಅನೇಕ ಸಾಧ್ಯತೆಗಳನ್ನು ನಮ್ಮ ಮುಂದಿಡುತ್ತದೆ:

ಧರ್ಮಗಳ ವಿಭಿನ್ನವಾದ ದಾರಿಗಳು ಕೊನೆಗೆ ಒಂದೇ ಸತ್ಯದತ್ತ ಒಯ್ಯುತ್ತವೆ; ವಿಭಿನ್ನ ಸಂಸ್ಕೃತಿಗಳನ್ನು ಹೊಂದಿದ ರಾಜ್ಯಗಳು ಭಿನ್ನತೆಯ ಉತ್ಸವನ್ನು ಆಚರಿಸುತ್ತಾ ರಾಷ್ಟ್ರದ ಏಕತೆಯನ್ನು ಸಾಧಿಸುತ್ತವೆ; ಇತ್ಯಾದಿ.

ಭೂಮಿತಾಯಿಯ ಪೂರ್ಣ ವರ್ಣಚಿತ್ರ

೧೯೬೯ರಲ್ಲಿ ಮಾನವನು ಚಂದಿರನ ಮಂದಿರದಲ್ಲಿ ಮೊದಲ ಹೆಜ್ಜೆ ಇರಿಸಿದ ಅಭೂತಪೂರ್ವ ಸಂದರ್ಭದಲ್ಲಿ ಅಪೊಲೊ ಗಗನನೌಕೆಯು ಭೂಮಿತಾಯಿಯ ಸಂಪೂರ್ಣ ವರ್ಣಚಿತ್ರವನ್ನು ಮೊದಲ ಬಾರಿಗೆ ತೆಗೆಯಿತು. ಭೂಮಿಯು

ಹೊರಗಿನಿಂದ ನೋಡಿದಾಗ ಹೇಗೆ ನೀಲವರ್ಣದಿಂದ ಸುಂದರವಾಗಿ ಕಾಣುವುದೆಂದು ಮಾನವನಿಗೆ ಪ್ರಪ್ರಥಮ ಬಾರಿಗೆ ಆಗ ಅರಿವಾಯಿತು. ನಾವು ಈ ದೇಶದವರು, ಏಶಿಯಾ ಖಂಡದವರು, ಯೂರೋಪಿನವರು, ಆಫ್ರಿಕಾದವರು, ಆಸ್ಟ್ರೇಲಿಯಾದವರು ಎಂದು ಹೇಳುವುದರ ಬದಲು, ಮಾನಸಿಕ ಜಾಗತೀಕರಣದ ಮಿಂಚು ಹೊಳೆದು, ನಾವೆಲ್ಲಾ 'ಭೂಮಿಯವರು' ಎಂದು ಹೇಳುವ ಅಮೃತಕಾಲಘಟ್ಟ ಅದಾಗಿತ್ತು.

ವಿಶ್ವದೆಲ್ಲ ಜನರು ರಕ್ತಸಂಬಂಧಿಗಳು

ನ್ಯಾಷನಲ್ ಜಿಯೊಗ್ರಫಿಕ್ ಸೊಸೈಟಿ ಮತ್ತು ಐ.ಬಿ.ಎಮ್. ಕಂಪನಿ ಹೋಮೋ ಸೇಪಿಯನ್ ಮಾನವನ ಉಗಮದ ಬಳಿಕ ನಡೆದ ಮಾನವ ವಲಸೆಯ ಕುರಿತು ಒಂದು ಸಂಶೋಧನೆಯನ್ನು ಕೈಗೊಂಡರು. ವಿಶ್ವದ ಜನರೆಲ್ಲರೂ ರಕ್ತ ಸಂಬಂಧಿಗಳು, ಈ ವಿಶ್ವವೊಂದು ರಕ್ತಸಂಬಂಧಿಗಳ ದೊಡ್ಡ ಕುಟುಂಬವೆಂಬುದು ಪಳೆಯುಳಿಕೆ ಮತ್ತು ಜೀನ್ ಸಂಬಂಧಿತ ಈ ಸಂಶೋಧನೆಯಿಂದ ಸ್ಪಷ್ಟವಾಗಿದೆ.

ಹೋಮೋ ಸೇಪಿಯನ್ ವರ್ಗಕ್ಕೆ ಸೇರಿದ ಮಾನವನ ಉಗಮ ಆಫ್ರಿಕಾದಲ್ಲಿ ಆಗಿ ಅದು ನಿಧಾನವಾಗಿ ಇತರ ಖಂಡಗಳಿಗೆ ಹರಡಿಕೊಂಡಿತು ಎಂಬುದು ಜೀನ್ ಕ್ಷೇತ್ರದ ಸಂಶೋಧನೆಗಳಿಂದ ತಿಳಿದು ಬಂದಿದೆ. ಮನುಕುಲದ ಹೆಂಗಸರಲ್ಲಿ ಮೈಟೋಕೋಂಡ್ರಿಯಲ್ ಡಿ.ಎನ್.ಎ.ಯು ಏನೂ ಬದಲಾವಣೆಯಿಲ್ಲದೆ ತಾಯಿಯಿಂದ ಮಗಳಿಗೆ ಬಳುವಳಿಯಾಗಿ ತಲೆಮಾರಿನುದ್ದಕ್ಕೂ ಸಹಸ್ರಮಾನ ಕಾಲ ಹರಿದು ಬರುತ್ತಿರುತ್ತದೆ. ಅದೇ ರೀತಿ ಮನುಕುಲದ ಗಂಡಸರಲ್ಲಿ ವೈ-ಕ್ರೋಮೋಸೋಮ್ ಏನೂ ಬದಲಾವಣೆಯಿಲ್ಲದೆ ತಂದೆಯಿಂದ ಮಗನಿಗೆ ಬಳುವಳಿಯಾಗಿ ತಲೆಮಾರಿನುದ್ದಕ್ಕೂ ಹರಿದು ಬರುತ್ತಿರುತ್ತದೆ. ಒಮ್ಮೊಮ್ಮೆ ಜೀನ್ ಸರಪಣಿಯಲ್ಲಿ ಸಣ್ಣ ವ್ಯತ್ಯಯ ಅನಿರೀಕ್ಷಿತವಾಗಿ ಉಂಟಾಗುತ್ತದೆ; ಮತ್ತು ಇದು ಮನುಕುಲದಲ್ಲಿ ಉಂಟಾದ ಇನ್ನೊಂದು ಕವಲನ್ನು ಸೂಚಿಸುತ್ತದೆ.

ವಿಶ್ವದೆಲ್ಲ ಜನರು ರಕ್ತಸಂಬಂಧಿಗಳು

ಸುಮಾರು ೧,೫೦,೦೦೦ ವರ್ಷಗಳಷ್ಟು ಹಿಂದೆ, ಆಫ್ರಿಕಾ ಖಂಡದ ಈಶಾನ್ಯ ಭಾಗದ (ಈಗಿನ ಕೆನ್ಯಾ, ಟಾಂಜಾನಿಯಾ, ಇಥಿಯೋಪಿಯಾ) ಸುಮಾರು ೧೦,೦೦೦ ಮಂದಿ ನಮ್ಮ ಪೂರ್ವಜರು ಜೀವಿಸುತ್ತಿದ್ದರು. ಆಗ ವಿಶ್ವದಲ್ಲಿ ಇದ್ದುದು ಹೋಮೋ ಸೇಪಿಯನ್ನರ ಅದೊಂದೇ ಗುಂಪು. ನಮ್ಮೆಲ್ಲರ ಮೂಲ ತಾಯಿ ಆ ಗುಂಪಿನಲ್ಲಿ ಒಬ್ಬಳಾಗಿದ್ದಳು. ಆ ಗುಂಪಿನಲ್ಲಿ ಇತರ ಹೆಂಗಸರೂ ಇದ್ದರು. ಆದರೆ ನಮ್ಮೆಲ್ಲರ ಮೂಲತಾಯಿಯ ಡಿ.ಎನ್.ಎ. ಮಾತ್ರ ಅಂದಿನಿಂದ ಇಂದಿನ ವರೆಗೆ, ತಾಯಿ-ಮಗಳ ಸರಪಣಿಯ ಮೂಲಕ ಉಳಿದು ಬಂದಿದೆ. ಅದೇ ಕಾಲದಲ್ಲಿ ನಮ್ಮೆಲ್ಲರ ವೈ-ಕ್ರೋಮೋಸೋಮಿನ ಮೂಲ ತಂದೆ ಜೀವಿಸಿದ್ದ. ಅವನ ಕಾಲದಲ್ಲಿ ಇತರ ಗಂಡಸರೂ ಇದ್ದರು. ಆದರೆ ನಮ್ಮೆಲ್ಲರ ಮೂಲ ತಂದೆಯ ಡಿ.ಎನ್.ಎ. ಮಾತ್ರ ಅಂದಿನಿಂದ ಇಂದಿನವರೆಗೆ, ತಂದೆ-ಮಗನ ಸರಪಣಿಯ ಮೂಲಕ ಉಳಿದು ಬಂದಿದೆ. ಸುಮಾರು ೭೦,೦೦೦-೫೦,೦೦೦ ವರ್ಷಗಳ ಹಿಂದೆ, ನಮ್ಮ ಪೂರ್ವಜರ ಒಂದು ಗುಂಪು ಆಫ್ರಿಕಾದಿಂದ ವಲಸೆ ಹೋಯಿತು. ಆದರೆ ಅದಕ್ಕಿಂತ ಸುಮಾರು

೧೮ ಲಕ್ಷ ವರ್ಷಗಳಷ್ಟು ಹಿಂದೆ ಹೋಮೋ-ಎರೆಕ್ಟಸ್ ಸಂತತಿಯವರು ಆಫ್ರಿಕಾದಿಂದ ಹೊರಟು ಏಷ್ಯಾ ಖಂಡಕ್ಕೆ ಬಂದವರು ಅಲ್ಲಿದ್ದರು. ನಮ್ಮ ಪೂರ್ವಜ ಹೋಮೋ ಸೇಪಿಯನ್ನರು ಅವರೊಡನಿದ್ದು, ಬಳಿಕ ತಾವೇ ಎಲ್ಲಾ ಕಡೆ ಹರಡಿಕೊಂಡರು. ಸುಮಾರು ೪೦,೦೦೦ ವರ್ಷಗಳ ಹಿಂದೆ ಒಂದು ಗುಂಪು ಹಿಮಾಲಯದ ಮೇಲ್ಭಾಗದ ಮಧ್ಯ-ಏಷ್ಯಾಕ್ಕೆ ಬಂತು. ಏಷ್ಯಾದಿಂದ ಹೊರಟು ಒಂದು ಗುಂಪು ಸುಮಾರು ೫೦,೦೦೦ ವರ್ಷಗಳ ಹಿಂದೆ ಆಸ್ಟ್ರೇಲಿಯಾವನ್ನು ತಲುಪಿತು.

ಮಧ್ಯ ಏಷ್ಯಾದಿಂದ ಒಂದು ಗುಂಪು ಸುಮಾರು ೪೦,೦೦೦-೩೦,೦೦೦ ವರ್ಷಗಳ ಹಿಂದೆ ಯುರೋಪ್ ಖಂಡಕ್ಕೆ ವಲಸೆ ಹೋಯಿತು. ಒಂದು ಗುಂಪು ಸುಮಾರು ೨೦,೦೦೦-೧೫,೦೦೦ ವರ್ಷಗಳ ಹಿಂದೆ ಅಮೇರಿಕಾ ಖಂಡಕ್ಕೆ ವಲಸೆ ಹೋಯಿತು. ಮಾನವ ರಕ್ತದ ಒಂದೊಂದು ಬಿಂದುವೂ ಜೀನ್-ಭಾಷೆಯಲ್ಲಿ ಬರೆದ ಮನುಕುಲದ ಮಿಲಿಯ ವರ್ಷಗಳ ಸುದೀರ್ಘ ಇತಿಹಾಸವಾಗಿದೆ. ರಕ್ತಸಂಬಂಧಿಗಳಾದ ಮಾನವರು ಜಾತಿ, ಮತ, ದೇಶ, ಭಾಷೆ, ಬಣ್ಣಗಳ ಹೆಸರಿನಲ್ಲಿ ನಡೆಸುವ ರಕ್ತಪಾತವನ್ನು ನಿಲ್ಲಿಸಿ, "ವಸುದೈವ ಕುಟುಂಬಕಂ" ಎಂಬ ಸತ್ಯವನ್ನು ಪ್ರಜ್ಞಾಪೂರ್ವಕವಾಗಿ ಒಪ್ಪುವುದು ಮನುಕುಲದ ಒಳಿತಿಗಾಗಿ ತೆಗೆದುಕೊಳ್ಳುವ ವಿವೇಕಪೂರ್ಣ ನಿರ್ಧಾರವೆನಿಸುತ್ತದೆ. ಜಾಗತೀಕರಣದ ಈ ಯುಗದಲ್ಲಿ ಭಯದಿಂದ ಅಭಯದತ್ತ ನಡೆಯುವ ಜಾಗೃತೀಕರಣವೂ ಮಾನವನ ಮನದಲ್ಲಾಗಲಿ.

– ಸಾಭಾರ : ಭಯೋತ್ಪಾದನೆ-ಭಾರತಕ್ಕಿರುವ ಸವಾಲುಗಳು
– ಪ್ರಕಾಶಕರು-ಮಹಾಜನ ವಿದ್ಯಾಸಂಸ್ಥೆ, ಮೈಸೂರು

* * *

ಅಪೂರ್ವವಾದ ಎರಡು ವೇದಮಂತ್ರಗಳು

– *ವಿನೋಬಾ*

ಓರ್ವ ವೈದಿಕ ಋಷಿ ಕೈಗಳ ಮಹಿಮೆಯನ್ನು ಹೇಳಿದ್ದಾನೆ.

ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ
ಅಯಂ ಮೇ ವಿಶ್ವ ಭೇಷಜಃ ಅಯಂ ಶಿವಾಬಿ ಮರ್ಶನಃ

ನನ್ನ ಈ ಕೈ ದೇವರು, ಈ ಕೈ ದೇವರಿಗಿಂತಲೂ ಶ್ರೇಷ್ಠ. ಈ ನನ್ನ ಕೈ ಇಡೀ ವಿಶ್ವಕ್ಕೆ ಔಷಧ ತಲುಪಿಸುವಂಥದ್ದಾಗಿದೆ. ಅದರಲ್ಲಿ ಎಲ್ಲ ಔಷಧಗಳು ಏಕತ್ರೀತವಾಗಿವೆ. ಇದರ ಸ್ಪರ್ಶ ಶಿವ, ಶುಭದಾಯಿ. ಅದು ಕಲ್ಯಾಣಕಾರಿ, ಮಂಗಳಮಯ ಮತ್ತು ಪವಿತ್ರ.

ಈ ಕೈ ದೇವರದು. ದೇವರಿಗಿಂತ ಹೆಚ್ಚು ದೊಡ್ಡದು. ಈ ಕೈಯಲ್ಲಿ ಎಲ್ಲ ಔಷಧಗಳು ಒಟ್ಟುಗೂಡಿವೆ. ಇದರ ಸಂಸ್ಪರ್ಶದಿಂದ ಪುಣ್ಯಕಾರ್ಯವಾಗುತ್ತದೆ. ಇದಕ್ಕಿಂತಲೂ ಶ್ರೇಷ್ಠ ಮಾತು ಯಾವುದಿರಲು ಸಾಧ್ಯ? ಇಲ್ಲಿ ಋಷಿ ನಾನು ದೇವರು ಎಂದು ಹೇಳುತ್ತಾ ಎರಡನೇ ವಾಕ್ಯದಲ್ಲಿ **ಭಗವತ್ತರಃ** ಅಂದರೆ ದೇವರಿಗಿಂತ ಶ್ರೇಷ್ಠನು ಎಂದು ಹೇಳುತ್ತಾನೆ. ಏಕೆಂದರೆ ದೇವರು ಅವ್ಯಕ್ತ. ನಾನು ವ್ಯಕ್ತ. ನಮ್ಮ ಕೈಗಳಿಂದ ಯಾವೆಲ್ಲ ಸೇವೆಗಳಾಗುತ್ತವೋ ಅವು ವ್ಯಕ್ತ ಮತ್ತು ಸೇವೆಯ ಕಾರಣದಿಂದ ಆ ಅವ್ಯಕ್ತದ ಗೌರವ. ಆ ಸೇವೆ, ಪೂಜೆಯಿಂದ ದೇವರ ವೈಭವ ಹೆಚ್ಚಾಗುತ್ತದೆ. ಅಲ್ಲದೇ ಈ ಇಡೀ ಸಂಪತ್ತು ಎರಡೂ ಕೈಗಳಿಂದ ಉಂಟಾಗುತ್ತದೆ. **ಕರಾಗ್ರೇ ವರ್ತತೇ ಲಕ್ಷ್ಮೀಃ, ಪ್ರಭಾತೇ ಕರದರ್ಶನಂ.** ಎಲ್ಲಿ ಕೈಗಳು ಕಲ್ಲಿನಂತಾಗಿರುತ್ತವೋ ಅಲ್ಲಿ ಲಕ್ಷ್ಮಿ ಇರುತ್ತಾಳೆ. ಆದ್ದರಿಂದ ಋಷಿ ಹೇಳುತ್ತಾನೆ – **ಅಯಂ ಮೇ ಭಗವತ್ತರಃ,** ನನ್ನ ಕೈಗಳು ದೇವರನ್ನು ಮೀರಿಸಿವೆ. ಇದಕ್ಕಿಂತ ಹೆಚ್ಚಾಗಿ ನಾಸ್ತಿಕ ಏನು ಹೇಳಬಲ್ಲ. ಸಮುದ್ರ ದೊಡ್ಡದೋ ಅಥವಾ ಮೋಡವೋ? ನಮ್ಮ ಮೇಲೆ ಮೋಡದ್ದು ನೇರ ಉಪಕಾರವಿದೆ. ಆದ್ದರಿಂದ ನಮ್ಮ ಮಟ್ಟಿಗೆ ಸಮುದ್ರಕ್ಕಿಂತ ಮೋಡವಿದೆ. ಸಮುದ್ರದ ನೀರಿನಿಂದಲೇ ಮೋಡವಾಗುತ್ತದೆಂಬುದೇನೋ ನಿಜ. ನಮ್ಮ ಮಟ್ಟಿಗೆ ಮೋಡದ್ದು ನೇರ ಉಪಕಾರವಿದೆ. ಕೈಯೇ ನಮಗೆ ಎಲ್ಲ ಕೆಲಸಗಳಲ್ಲಿ ಪ್ರತ್ಯಕ್ಷವಾಗಿ ನೆರವಾಗುತ್ತದೆ. ಆದ್ದರಿಂದ ದೇವರಿಗಿಂತ ಕೈ ಹೆಚ್ಚಿನದೆಂದು ಋಷಿ ಹೇಳಿಬಿಟ್ಟ.

ಅಯಂ ಮೇ ವಿಶ್ವ ಭೇಷಜಃ – ಕೈಯಲ್ಲಿ ವಿಶ್ವ ಔಷಧ ತುಂಬಿದೆ. ಕೈಯಿಂದ ತಾಯಿ ಮಕ್ಕಳನ್ನು ಪ್ರೀತಿಸುತ್ತಾಳೆ. ಆದ್ದರಿಂದ ಅದರಲ್ಲಿ ಔಷಧ ತುಂಬಿದೆ.

ಇಯಂ ಮೇ ನಾಭಿಃ

ಇದು ಸುಂದರ ಸರಳ ಮಂತ್ರ. ಈ ಮಂತ್ರದ ದ್ರಷ್ಟಾ ನಾಭನೇದಿಷ್ಠೋ ಮಾನವಃ. ಮಾನವನ ಪ್ರತಿನಿಧಿ ತನ್ನ ನಾಭಿಯಲ್ಲಿ (ಶರೀರದಲ್ಲಿ) ಪ್ರತಿಷ್ಠಿತನಾಗಿದ್ದಾನೆ. ಹೀಗೆ ಅಂದ ಒಬ್ಬ ಋಷಿ.

ಇಯಂ ಮೇ ನಾಭಿಃ ಈ ಶರೀರ ನನ್ನ ನಾಭಿ. ನನ್ನ ನಾಭಿಯೆಂದರೆ ಕೇಂದ್ರಸ್ಥಾನ. ಇಹ **ಮೇ ಸದಸ್ತಮ್** ಇದು ನನ್ನ ಸಹಸಾಧನೆಯ ಸ್ಥಳ. ಸದ ಎಂದರೆ

ಸಹ. ಸ್ತಮ್ ಎಂದರೆ ಸ್ಥಾನ. **ಇಮೇ ಮೇ ದೇವಾಃ** ಇವು ನನ್ನ ದೇವರು. ಬಹಳಷ್ಟು ದೇವರಿದ್ದಾರೆ. ಕಲ್ಲಿನಿಂದ ತಯಾರಾದ ಮೂರ್ತಿಗಳು ದೇವರು. ಎದುರಿಗಿರುವ ಮರಗಳು ಕೂಡ ನನ್ನ ದೇವರು. ಎದುರಿಗೆ ಕುಳಿತವರು ಕೂಡ ನನ್ನ ದೇವರು. **ಅಯಂ ಮ್ಯಮಿ ಸರ್ವಃ** ನಾನು ಆತ್ಮರೂಪದಿಂದ ಸರ್ವರೂಪಿ! ಆತ್ಮದ ರೂಪದಲ್ಲಿ ಸರ್ವರೂಪಿಯಾಗಿದ್ದೇನೆ.

ಇದರ ಸಾರವೇನು? ನಾಭಿ ಇಡೀ ವಿಶ್ವದ ಮಧ್ಯ ಬಿಂದುವೆಂದು ಸಿದ್ಧವಾಯಿತು. ನಮ್ಮ ಶರೀರ ಕೇಂದ್ರ ಬಿಂದುವಾಗಿರುವುದರಿಂದ ಅದು ಸ್ವಚ್ಛ, ನಿರ್ಮಲ ಮತ್ತು ಎಲ್ಲ ರೋಗಗಳಿಂದ ಮುಕ್ತವಾಗಿರಬೇಕು. ಶುದ್ಧಿಯ ಆರಂಭ ನಮ್ಮಿಂದಲೇ. ಎರಡನೆಯ ಮಾತೇನೆಂದರೆ ನನ್ನ ಸಾಮೂಹಿಕ ಸಾಧನೆಯ ಸ್ಥಾನ ಕೂಡ ಅದೇ. ಆದ್ದರಿಂದ ವ್ಯಕ್ತಿಗತ ಅಹಂಕಾರ ಶೂನ್ಯವಾಗಬೇಕು. ನಾನು ಶೂನ್ಯನಾದಾಗಲೇ ಸಾಮೂಹಿಕ ಸಾಧನೆಯಾಗುತ್ತದೆ. ಅಹಂ ಎನ್ನುವುದು ಗಟ್ಟಿಯಾಗಿದ್ದಲ್ಲಿ ಸಮೂಹ ಕ್ಷೀಣವಾಗಿಬಿಡುವುದು. ಅಹಂ ಮುಕ್ತಿಯಿಲ್ಲದೆ ಸಮೂಹ ಸಾಧನೆ ಆಗಲು ಸಾಧ್ಯವಿಲ್ಲ. ಮೂರನೆಯ ಮಾತೇನೆಂದರೆ ಯಾವುದೆಲ್ಲವು ಅಕ್ಕಪಕ್ಕದಲ್ಲಿ ಕಾಣುತ್ತದೋ ಅದೆಲ್ಲವೂ ದೇವರು. ಸೃಷ್ಟಿಯಲ್ಲಿ ಪರಮಾತ್ಮ ಭಾವನೆ ಇರಬೇಕು. ಯಾರಾದರೂ ಕಠಿಣವಾಗಿ ಮಾತನಾಡುತ್ತಾನೆ ಎಂದರೆ ಅವರು ದೇವರು! ಮೃದುವಾಗಿ ಮಾತನಾಡುವವನು ದೇವರು. ಇವರೆಲ್ಲರೂ ವಿವಿಧ ಪ್ರಕಾರದ ಪರಮೇಶ್ವರ. ಮರ ಕಲ್ಲು ಕೂಡ ಪರಮೇಶ್ವರ. ಇಂಥ ಭಾವನೆಯನ್ನು ಸೃಷ್ಟಿಗೆ ಸಂಬಂಧಿಸಿದಂತೆ ಇಟ್ಟುಕೊಳ್ಳಬೇಕು.

ನಾಲ್ಕನೆಯ ಮಾತೇನಂದರೆ ನಾನು ಸರ್ವರೂಪಿ ಇಡೀ ಸೃಷ್ಟಿ ನನ್ನಲ್ಲಿ ಒಟ್ಟುಗೂಡಿದೆ. ಹೊರಗಡೆಗೆ ಯಾವುದೂ ಮಿಕ್ಕಿಲ್ಲ. ಸೃಷ್ಟಿಯಲ್ಲಿ ನಾವೇ ನಾವು ತುಂಬಿಕೊಂಡಿದ್ದೇವೆ. ನಾನೇ ಸರ್ವರೂಪಿ.

ಸಾಮೂಹಿಕ ಸಾಧನೆಗಾಗಿ ಈ ಮಂತ್ರವನ್ನು ಋಷಿ ಕೊಟ್ಟಿದ್ದಾನೆ.

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಮೈಸೂರಿನ ಮಹಾಜನ ವಿದ್ಯಾಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೆ.ವಿ.ಪ್ರಭಾಕರ್ ನೇತೃತ್ವದಲ್ಲಿ ಆ ಕಾಲೇಜಿನ ಸಿಬ್ಬಂದಿ ವರ್ಗದ ೪೦ ಸದಸ್ಯರು ಟ್ರಸ್ಟಿಗೆ ಭೇಟಿ ಕೊಟ್ಟರು. ನಂತರ ಹೊಸ ಜೀವನ ದಾರಿ ಕೇಂದ್ರಕ್ಕೂ ಭೇಟಿಕೊಟ್ಟು ಟ್ರಸ್ಟಿನ ಧ್ಯೇಯೋದ್ದೇಶಗಳನ್ನು ತಿಳಿದುಕೊಂಡರು. ನಂತರ ಅರ್ಧಗಂಟೆಕಾಲ ಪ್ರಶ್ನೋತ್ತರ ಕಾರ್ಯಕ್ರಮ ನಡೆಯಿತು.

ಸಂತೋಷ್ ಕೌಲಗಿಯವರು ಧಾರವಾಡದಲ್ಲಿಯ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್‌ನಲ್ಲಿ ಇಂದಿನ ಕೃಷಿ ಸವಾಲುಗಳ ಬಗ್ಗೆ ಉಪನ್ಯಾಸ ನೀಡಿದರು.

ಬೆಂಗಳೂರಿನ ಜೆಟ್ ಎವಿ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಮುಖ್ಯಸ್ಥರು ಮತ್ತು ಸಿಬ್ಬಂದಿ ವರ್ಗದವರು ಟ್ರಸ್ಟಿಗೆ ಭೇಟಿಕೊಟ್ಟರು ಹಾಗೂ ಟ್ರಸ್ಟಿನ ಅರಣ್ಯಾಭಿವೃದ್ಧಿ ಯೋಜನೆಗೆ ಧನಸಹಾಯ ಮಾಡುವುದಾಗಿ ಭರವಸೆ ಕೊಟ್ಟರು.

ಬೆಂಗಳೂರಿನ ಟ್ರಸ್ಟಿನ ಅಭಿಮಾನಿ ಸತ್ಯಪ್ರಕಾಶ್ ವಾರಣಾಸಿ ಟ್ರಸ್ಟಿಗೆ ಭೇಟಿಕೊಟ್ಟರು.

ಮಕ್ಕಳ ದಿನಾಚರಣೆ ಪ್ರಯುಕ್ತ ಮಂಡ್ಯದ ರಾಷ್ಟ್ರೋತ್ಥಾನ ಬಳಗದ ಹೆಚ್.ಎನ್. ರಮೇಶ್‌ರವರು ೧೫೦೦ ರುಪಾಯಿಗಳನ್ನು ಕಳುಹಿಸಿದ್ದರು.

ಟ್ರಸ್ಟಿನ ಶಿಶುವಿಹಾರದ ಮಕ್ಕಳು ಹಾಗೂ ಕರುಣಾಗೃಹದ ಮಕ್ಕಳಿಗೆ ಹಾಲನ್ನು ವಿತರಿಸಲಾಯಿತು.


ಗಾಂಧೀರಚಿತ ಹಿಂದ್ ಸ್ವರಾಜ್‌ದ ಶತಮಾನೋತ್ಸವದ ನಿಮತ್ತ ಸಂಸ್ಥೆಯ ಅಧ್ಯಕ್ಷರು ಮಂಡ್ಯದ ಸರ್ಕಾರಿ ಬಾಲಕ-ಬಾಲಕಿಯರ ಪ್ರಥಮದರ್ಜೆ ಕಾಲೇಜಿನಲ್ಲಿ ಪ್ರತ್ಯೇಕ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಖಾದಿ ಮತ್ತು ಗಾಂಧೀ ಸಾಹಿತ್ಯ ಮಾರಾಟದ ವ್ಯವಸ್ಥೆ ಮಾಡಲಾಗಿತ್ತು. ಸುಮಾರು ೩೦೦೦ ರೂಗಳ ವ್ಯಾಪಾರ ನಡೆಯಿತು.

೨೦೦೯ ನವೆಂಬರ್ ಮಾಹೆಯ ದಾನಿಗಳು

ಶ್ರೀ ಜಿ.ವಿ.ಸುಂದರ್, ಶ್ರೀಮತಿ ಗೌರಮ್ಮ, ಶ್ರೀ ಎಸ್.ಕೆ.ನರಸಿಂಹಶೆಟ್ಟಿ, ಶ್ರೀಮತಿ ಎಂ.ಎನ್.ನೀಲಮ್ಮ, ಶ್ರೀ ಡಿ.ಎಸ್.ನಾಡಿಗ್ - ಬೆಂಗಳೂರು
ಶ್ರೀ ಯು.ಎನ್.ರವಿಕುಮಾರ್, ಶ್ರೀ ವೆಂಕಟೇಶ್, ಡಾ.ಮನೋಹರ್, ಶ್ರೀಮತಿ ವಿಜಯಾ - ಮೈಸೂರು
ರಾಷ್ಟ್ರೋತ್ಥಾನ ಬಳಗ - ಮಂಡ್ಯ ಮತ್ತು ಸಂಸ್ಥೆಯ ಮಾಹೆಯಾನ ದಾನಿಗಳಾದ ಶ್ರೀ ರತ್ನಾಕರ್‌ನಾಯಕ್, ಶ್ರೀಮತಿ ಸುಜಾತಾ, ಶ್ರೀಮತಿ ಜೋಸೆಫಿನಾ ಮೇರಿ, ಶ್ರೀ ಅಶ್ವತ್ಥನಾರಾಯಣ, ಶ್ರೀ ನಾಗೇಶ್‌ಕಾಮತ್ - ಬೆಂಗಳೂರು ; ಶ್ರೀಮತಿ ಸಾವಿತ್ರಮ್ಮ - ಹಾಸನ ; ಶ್ರಿ ಸಾಂಬಶಿವಯ್ಯ - ಮಂಗಳೂರು ಇವರುಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸರ್ಮಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೭೩

– ಸುರೇಂದ್ರ ಕೌಲಗಿ



ಸಮಕಾಲೀನ ಇತಿಹಾಸದ ವಿಶಿಷ್ಟ ವ್ಯಕ್ತಿಯನ್ನು ತುಂಬ ನಿಕಟದಲ್ಲಿ ನೋಡುವ ಭಾಗ್ಯ ದೊರೆತದ್ದು ಜೀವನದ ಅಪೂರ್ವ ಕ್ಷಣ. ಈ ಮೊದಲು ಇತಿಹಾಸವನ್ನು ನಿರ್ಮಿಸಿ ಈಗಲೂ ನಿರ್ಮಿಸುತ್ತಿರುವ ವ್ಯಕ್ತಿ ಅವರಾಗಿದ್ದಾರೆ. ಆ ದೃಶ್ಯ ಮರೆಯಲಾಗದ, ಅದು ಅಳಿಸಿಹೋಗದ ಚಿತ್ರವಾಗಿ ಉಳಿದುಕೊಂಡರೆ ಆಶ್ಚರ್ಯದ ಸಂಗತಿಯೇನಲ್ಲ. ವಾಸ್ತವದಲ್ಲಿ ಹೀಗಾಗಬೇಕಾದುದು ಉಚಿತವೇ ಆಗಿದೆ. ೧೯೫೯ರಲ್ಲಿ ಚೀಣಾದ ದುರಾಕ್ರಮಣಕ್ಕೆ ಒಳಗಾಗಿ ಆಗತಾನೆ ಚೀನಾದಿಂದ ತಮ್ಮ ಸಾವಿರಾರು ಧರ್ಮಾನುಯಾಯಿಗಳೊಂದಿಗೆ ಹಲವಾರು ದಿನ ಕಾಡುಮೇಡು ಬೆಟ್ಟಗುಡ್ಡ ದಾಟಿ ಹಸಿವು ನಿದ್ದೆ ಮುಂತಾದುವುಗಳ ಪರಿವೆ ಇಲ್ಲದೆ ಆತ್ಮಬಲ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟದಲ್ಲಿ ಅಂತಿಮ ಜಯ ಕಾಣುವ ಅಚಲ ನಂಬಿಕೆಯೊಂದಿಗೆ ದಲೈಲಾಮರವರು ಭಾರತಕ್ಕೆ ಓಡಿ ಬಂದು ಹಿಮಾಲಯದ ತಪ್ಪಲಲ್ಲಿ ಭಾರತ ಸರ್ಕಾರದ ನೆರವಿನೊಂದಿಗೆ ಧರ್ಮಶಾಲಾದಲ್ಲಿ ತಮ್ಮ ದೇಶದ ತಾತ್ಕಾಲಿಕ ಸರ್ಕಾರವನ್ನು ರಚಿಸಿಕೊಂಡಿದ್ದರು. ಟಿಬೆಟ್ ಮೇಲಿನ ಚೀನಾದ ಆಕ್ರಮಣದ ವಿರುದ್ಧ ಇಡೀ ಭಾರತ ಕೋಪಗೊಂಡಿತ್ತು.

ಟಿಬೆಟಿಯನ್ನರ ಅನಾಥಪ್ರಜ್ಞೆಗೆ ಸಾಂತ್ವನ ನೀಡುವುದರ ಮೂಲಕ ತನ್ನ ಎಲ್ಲ ನೈತಿಕ ಬೆಂಬಲವನ್ನು ಪ್ರಕಟಿಸಿತ್ತು. ಭಾರತ ಪ್ರಕಟಿಸುತ್ತಿದ್ದ ಈ ಸಹಾನುಭೂತಿಯ ಪ್ರತಿನಿಧಿ ರೂಪವಾಗಿ ಮೈದಳೆದಿರುವರೋ ಎಂಬಂತೆ ಮಾನವ ಹಕ್ಕುಗಳ ಶ್ರೇಷ್ಠ ಪ್ರತಿಪಾದಕ ಹಾಗೂ ಸಾಮ್ರಾಜ್ಯ ಶಾಹಿಯ ಕಟು ವಿರೋಧಿ ಜಯಪ್ರಕಾಶ ನಾರಾಯಣರು ದಲೈಲಾಮಾರವನ್ನು ಭೇಟಿ ಮಾಡಲು ಹೋಗಿದ್ದರು. ಧರ್ಮಶಾಲಾಗೆ ಅವರೊಂದಿಗೆ ನಾನೂ ಹೋಗಿದ್ದೆ. ದಲೈಲಾಮಾರವರಿಗೆ ನೈತಿಕ ಬೆಂಬಲವನ್ನು ಸೂಚಿಸುವುದು ಮತ್ತು ಚೀಣಾದ ದುರಾಕ್ರಮಣವನ್ನು ಖಂಡಿಸುವುದು ಆ ಭೇಟಿಯ ಉದ್ದೇಶ್ಯವಾಗಿತ್ತು. ಭಾರತದ ಪತ್ರಿಕೆಗಳಲ್ಲಿ ಈ ಭೇಟಿಗೆ ವಿಶೇಷ ಪ್ರಾಶಸ್ತ್ಯವನ್ನು ಕೊಡಲಾಗಿತ್ತು. ಆಗ ದಲೈಲಾಮಾರವರಿಗೆ ಸುಮಾರು ೨೫ವರ್ಷಗಳಿರಬಹುದು ನೋಡುವುದಕ್ಕೆ ಸ್ಫುರದ್ರೂಪಿ. ಮುಖದ ಮೇಲೆ ಬೌದ್ಧ ದರ್ಮ ವಿಚಾರದ ಪ್ರಭಾವಳಿ. ಕಣ್ಣುಗಳಲ್ಲಿ ಅಪೂರ್ವವಾದ ತೇಜಸ್ಸು. ತಮ್ಮ ದೇಶ ಚೀನಾದಂಥ ಬಲಿಷ್ಠ ರಾಷ್ಟ್ರದ ಆಕ್ರಮಣಕ್ಕೆ ಒಳಗಾಗಿದ್ದರೂ ತಮ್ಮ ಅಹಿಂಸಾ ಧರ್ಮದ ಟಿಬೆಟ್ ಇಂದಲ್ಲ ನಾಳೆ ಬಿಡುಗಡೆ ಹೊಂದಿ ಮತ್ತೆ ತಮ್ಮ ದೇಶ ಮೊದಲಿನಂತೆ ತನ್ನ ಧರ್ಮದ ಮಾರ್ಗದಲ್ಲಿ ನಡೆಯುತ್ತದೆ ಎಂಬ ಆಶಾದೀಪ ಅವರ ಕಣ್ಣುಗಳಲ್ಲಿ ಬೆಳಗುತ್ತಿತ್ತು. ದಲೈಲಾಮಾರವರಿಗೆ

ತಮ್ಮನ್ನು ಭೇಟಿಮಾಡಲು ಜೆ.ಪಿ.ಯವರಂಥ ಓರ್ವ ಕ್ರಾಂತಿಕಾರಿ ಪುರುಷನೊಬ್ಬ ಬಂದದ್ದು ಬಹಳಷ್ಟು ಸಮಾಧಾನ ಮತ್ತು ಧೈರ್ಯ ತಂದು ಕೊಟ್ಟಿರಬಹುದು. ಈ ಮೊದಲು ಭಾರತದ ಬೇರೆ ನಾಯಕರು ದಲೈಲಾಮಾರವರನ್ನು ಭೇಟಿ ಮಾಡಿದ್ದರು. ಜವಹರ್ ನೆಹರೂರವರ ಭೇಟಿ ಖಂಡಿತವಾಗಿಯೂ ಆಗಿರುತ್ತದೆ. ಆದರೆ ಜೆ.ಪಿ.ಯವರ ಭೇಟಿಯ ಮುಂದೆ ನೆಹರೂರವರ ಭೇಟಿ ಸಹ ತನ್ನ ಮೊನಚನ್ನು ಕಳೆದುಕೊಳ್ಳುತ್ತದೆ. ದಲೈಲಾಮಾರಿಗೆ ಆಶ್ರಯ ಕೊಟ್ಟು ದೊಡ್ಡ ಕೆಲಸವನ್ನೇ ನೆಹರೂ ಮಾಡಿದ್ದರು. ಆದರೆ ಚೀನಾದ ಆಕ್ರಮಣವನ್ನು ಬಲವಾಗಿ ಖಂಡಿಸಲಾಗಲಿಲ್ಲ. ಜೆ.ಪಿ.ಯವರು ದಲೈಲಾಮಾರನ್ನು ಭೇಟಿ ಮಾಡಿದಾಗ ಅವರು ಪಕ್ಷ ರಾಜಕೀಯದ ರಾಜಕಾರಣವನ್ನು ತ್ಯಜಿಸಿ ಅಹಿಂಸಾ ವಿಚಾರ ಪ್ರಧಾನ ಸರ್ವೋದಯ ಆಂದೋಲನಕ್ಕೆ ತಮ್ಮ ಜೀವನ ದಾನ ಮಾಡಿದ್ದರು. ಇಬ್ಬರೂ ಕ್ರಾಂತಿಕಾರಿಗಳೇ, ದಲೈಲಾಮಾರವರು ಟಿಬೆಟ್‌ನಲ್ಲಿ ಇದ್ದುಕೊಂಡು ಚೀನಾದ ದಮನಕಾರಿ ನೀತಿಯನ್ನು ವಿರೋಧಿಸಿದ್ದರು. ಅದೂ ಅಹಿಂಸಾ ಶಕ್ತಿಯ ಬಲದಿಂದ. ಎಷ್ಟೇ ಘೋರ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದರೂ ಅಹಿಂಸಾ ತತ್ವದಲ್ಲಿಯ ತಮ್ಮ ವಿಶ್ವಾಸ ಮತ್ತು ಅದರ ಅಂತಿಮ ಯಶಸ್ಸಿನ ಬಗ್ಗೆ ದಲೈಲಾಮಾ ನಂಬಿಕೆ ಕಳೆದುಕೊಂಡಿರಲಿಲ್ಲ. ಅದೇ ರೀತಿ ಜೆ.ಪಿ.ಯವರು ಪ್ರಚಲಿತ ಹಿಂಸಾಮಯ ಸಮಾಜಕ್ಕೆ ಪರ್ಯಾಯವಾಗಿ ಸರ್ವೋದಯ ಸಮಾಜವನ್ನು ರಚಿಸಲು ಕಂಕಣಬದ್ಧರಾಗಿದ್ದವರು ಜೆ.ಪಿ. ಇಂಥ ಇಬ್ಬರು ಕ್ರಾಂತಿಕಾರಿಗಳು ಟಿಬೆಟ್‌ನ ಭವಿಷ್ಯದ ಬಗ್ಗೆ ಗಂಭೀರವಾಗಿ ಚರ್ಚಿಸಲು ಮುಖಾಮುಖಿಯಾಗಿ ಕುಳಿತು ಚರ್ಚೆ ಮಾಡುತ್ತಿದ್ದುದ್ದನ್ನು ನೋಡುವ ಮತ್ತು ಕೇಳುವ ಸೌಭಾಗ್ಯ ದೊರೆತದ್ದು ನನ್ನ ಪುಣ್ಯ ವಿಶೇಷ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು.

ಜೆ.ಪಿ.ಯವರು ಟಿಬೆಟ್ ಆಕ್ರಮಣದ ಬಗ್ಗೆ ದಲೈಲಾಮರವರಿಂದ ಎಲ್ಲ ವಿಷಯಗಳನ್ನು ಪ್ರಥಮ ಮಾಹಿತಿಯಾಗಿ ಪಡೆದ ನಂತರ ಅವರಿಗೆ ತಮ್ಮ ಹೃದಯ ಕಿತ್ತು ಬಂದಂತೆ ಅನಿಸಿರಬಹುದು. ಅವರ ಭೇಟಿಯ ನಂತರ ಜೆ.ಪಿ.ದೇಶವನ್ನೆಲ್ಲಾ ಸುತ್ತಿ ಟಿಬೆಟ್‌ಗಾಗಿರುವ ಅನ್ಯಾಯವನ್ನು ಮನ ಮುಟ್ಟುವಂತೆ ವಿವರಿಸಲಾರಂಭಿಸಿದರು. ಟ್ರಾಜಿಡಿ ಆಫ್ ಟಿಬೆಟ್; ಟಿಬೆಟ್ ದುರಂತ ಎಂಬ ಚಿಕ್ಕ ಪುಸ್ತಕ ಬರೆದು ಅದರಲ್ಲಿ ಚೀನಾದ ದುರಾಕ್ರಮಣವನ್ನು ವಿವರಿಸಿ ಖಂಡಿಸಿದರು. ಬಿಳಿ ರಕ್ಷಾಪುಟದ ಆ ಪುಸ್ತಕ ಬಹಳಷ್ಟು ಜನಪ್ರಿಯವಾಯಿತು. ಅಲ್ಲದೆ ಅನೇಕ ಭಾರತೀಯರ ಕಣ್ಣು ತೆರೆಯಿಸಿತು. ಮುಂದೆ ಅವರು ಕಲ್ಕತ್ತಾ, ಮುಂಬಯಿ, ಚನ್ನೈ, ಬೆಂಗಳೂರು ಮುಂತಾದ ನಗರಗಳಲ್ಲಿ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಟಿಬೆಟ್‌ನ ದುರಂತದ ಬಗ್ಗೆ ತಮ್ಮ ನೋವನ್ನು ತೋಡಿಕೊಂಡರು. ಟಿಬೆಟ್ ಆಕ್ರಮಣದ ಮೂಲಕ ಪ್ರಬಲ ಅಂತಾರಾಷ್ಟ್ರೀಯ ಅಭಿಪ್ರಾಯ ರೂಪಿತಗೊಳ್ಳಬೇಕೆಂಬುದು ಜೆ.ಪಿ.ಯವರ ಮಹಾದಾಸೆಯಾಗಿತ್ತು. ಜೆ.ಪಿ.ಯವರ ಜೀವನದಲ್ಲಿ ತುಂಬ ನೋವನ್ನೂ, ಬೇಗುದಿಯನ್ನೂ, ದುಃಖವನ್ನೂ ಉಂಟುಮಾಡಿದ ಘಟನೆಗಳಲ್ಲಿ ಚೀನಾದ ಟಿಬೆಟ್ ಆಕ್ರಮಣವಾಗಿತ್ತು.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಎಸ್.ಎನ್.ಶ್ರೀಧರಮೂರ್ತಿ – ದಾವಣಗೆರೆ
ಶ್ರೀ ಕೆ.ಎಂ.ಉಡುಪ – ಉಡುಪಿ
ಶ್ರೀ ಎಸ್.ಹೆಚ್.ಜೋಷಿ – ಬೆಂಗಳೂರು
ಶ್ರೀ ಕೆ.ರಾಘವೇಂದ್ರ – ಮೈಸೂರು
ಶ್ರೀ ಕೆ.ಎಸ್.ಶ್ರೀನಿವಾಸಮೂರ್ತಿ – ಮೈಸೂರು
ಶ್ರೀಮತಿ ಆರ್.ಗೀತಾ – ಮೈಸೂರು
ಮುಖ್ಯಗ್ರಂಥಪಾಲಕರು, ಕನ್ನಡ ವಿಶ್ವವಿದ್ಯಾನಿಲಯ – ಹಂಪಿ
ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಾಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,
ಶ್ರೀ ಎಂ.ಎಸ್.ರಂಗನಾಥ, ಶ್ರೀ ಬಿ.ವಿ.ಸುರೇಶ್,
ಶ್ರೀ ಎಸ್.ಕೆ.ನರಸಿಂಹಶೆಟ್ಟಿ – ಬೆಂಗಳೂರು
ಶ್ರೀ ಜಿ.ಎಸ್.ಸುಬ್ರಮಣ್ಯ, ಶ್ರೀ ಎಂ.ಕೆ.ಕೆಂಪೇಗೌಡ – ಮೈಸೂರು
ಶ್ರೀ ಎಸ್.ಶ್ರೀನಿವಾಸಶೆಟ್ಟಿ – ಮಂಡ್ಯ ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 DTP Sanketh, Melkote. Printed at Sanketh, Mudrana, Melkote. Phone : 08236 – 299998 e-mail : janapada@yahoo.com web : janapada.net